GOVERNMENT OF TAMIL NADU

ಮೂರನೇ ತರಗತಿ

(STANDARD THREE)

ಅವಧಿ – I

(TERM-I)

ಗಣಿತ

ವಿಜ್ಞಾನ

ಸಮಾಜ ವಿಜ್ಞಾನ

MATHEMATICS, SCIENCE AND SOCIAL SCIENCE
KANNADA MEDIUM

Department of School Education

Untouchability is inhuman and a crime

Government of Tamil Nadu

First Edition - 2026

(Published under New Syllabus in Trimester Pattern)

Price Rs.

A call can change your life (24×7 toll free helplines for children below 18 years)

If you are forced into Child Marriage or Child Labour, If you are Emotionally, Physically, Sexually Harassed or Abused,

CHILD LINE 1098 NIGHT & DAY

If you feel unsafe dial CHILDLINE 1098 Night & Day

Caller details will be kept confidential

If you are feeling Threatened or being Abused or Harassed - Emotionally, Physically or Sexually, If you are feeling unsafe, If you need guidance for Examinations or Higher Education

14417 Education Information Centre

Dial 14417

Caller details will be kept confidential

Content Creation

State Council of Educational Research and Training

© SCERT 2026

Printing & Publishing

Tamil Nadu Textbook and Educational Services Corporation

Foreword

The early years of childhood are a time of wonder-when curiosity is boundless, imagination is vivid, and every experience becomes a step in the journey of learning. These textbooks for Classes 1 to 3 have been developed to honour this spirit, creating a learning experience that is joyful, meaningful, and engaging.

Developed as part of the **Tamil Nadu State Education Policy-2025**, these books mark a significant step towards strengthening foundational education in the State. The vision and direction provided by the **Hon'ble Minister for School Education** have ensured that the policy's emphasis on child-centred, competency-based, and inclusive learning is meaningfully reflected in these materials.

The leadership of the **Additional Chief Secretary,** School Education has been instrumental in ensuring the integration of 21st-century skills and knowledge, and in shaping the textbooks into engaging story-driven learning experiences.

This is further reflected in a competency-based approach to curriculum and assessment that moves beyond rote learning to foster deep conceptual understanding and meaningful application. The integration of value education to build character, along with life skills, art and motor skill development, enables the holistic development of the child.

The members of the High-Level Curriculum Expert Committee, the Chairperson and the members of the Curriculum Development Committee, have provided constant guidance, shaping and refining these materials through their insights and expertise, alongside the contributions of educators and practitioners acknowledged elsewhere in this book.

At this foundational stage, learning must build strong foundations while supporting the overall development of the child. These textbooks bring together a carefully designed set of features that make learning active, engaging, and meaningful:

- Opportunities for speaking and listening, building confidence in expression
- Activities that strengthen logical thinking and conceptual understanding
- Integrated spaces for reading and writing practice within lessons
- Fine and gross motor skill development through drawing, colouring, tracing, and movement-based tasks
- Simple avenues for independent learning and self-reflection

The books also integrate values and life skills, helping children develop empathy, cooperation, responsibility and confidence.

Learning is guided by a competency-based approach that moves beyond memorisation towards understanding and application. Assessment is embedded within the learning process, making it continuous, meaningful and supportive.

These textbooks are learning companions that invite children to explore, think and express. They represent a shared commitment to enabling every child to learn with joy, grow with confidence, and build a strong foundation for the future-advancing a vision of **"Education reimagined, inclusive, equitable, and future-ready".**

DIRECTOR
State Council of Educational
Research and Training (SCERT)
Tamil Nadu

THE CONSTITUTION OF INDIA

PREAMBLE

WE, THE PEOPLE OF INDIA, having solemnly resolved to constitute India into a **SOVEREIGN SOCIALIST SECULAR DEMOCRATIC REPUBLIC** and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the unity and integrity of the Nation;

IN OUR CONSTITUENT ASSEMBLY this twenty-sixth day of November, 1949, do **HEREBY ADOPT, ENACT AND GIVE TO OURSELVES THIS CONSTITUTION.**

ಮೂರನೇ ತರಗತಿ

ಅವಧಿ - I

ಗಣಿತ

ಮುನ್ನುಡಿ

ತಮಿಳುನಾಡು ರಾಜ್ಯ ಶಿಕ್ಷಣ ನೀತಿ (TNSEP) 2025 ಪ್ರಾಥಮಿಕ ಹಂತದ ಮಕ್ಕಳಿಗೆ ಕೌಶಲ್ಯ ಆಧಾರಿತ ಕಲಿಕೆಯನ್ನು ಪಡೆಯಲು ದೃಢೀಕರಿಸಲು ಕಲಿಕಾ ಮಾರ್ಗಆಧಾರಿತ ಮತ್ತು ಅನುಭವ ಆಧಾರಿತ ಕಲಿಕೆಗೆ ಒತ್ತು ನೀಡುವುದು.

ಗಣಿತ ಕೌಶಲ್ಯವನ್ನು ಸುಧಾರಿಸಲು ವಿಶಿಷ್ಟವಾದುದನ್ನು ಹೇಳಿ

ಕಲಿಯೋಣ

ಕಥೆಗಳು ಮತ್ತು ನಿಜ ಜೀವನದ ಸನ್ನಿವೇಶಗಳ ಮೂಲಕ ಪಾಠಗಳನ್ನು ದೈನಂದಿನ ಅನುಭವಗಳಿಗೆ ಸಂಪರ್ಕಿಸುವುದು.

ಮಾಡಿ ನೋಡೋಣ

ಪ್ರಾಯೋಗಿಕ ಅಭ್ಯಾಸಗಳನ್ನು ಮಕ್ಕಳೊಂದಿಗೆ ಸಮನ್ವಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು. ಮತ್ತು ಹೊಸ ಪರಿಕಲ್ಪನೆಗಳ ಪಾಂಡಿತ್ಯವನ್ನು ಪಡೆಯಲು ಸಹಾಯವಾಗುತ್ತದೆ.

ಅಭ್ಯಾಸ ಮಾಡೋಣ

ಆಟಗಳು ಮತ್ತು ಚಟುವಟಿಕೆಗಳ ಮೂಲಕ ಮೂಲಭೂತ ಗಣಿತ ಕೌಶಲ್ಯಗಳನ್ನು ಬಲಪಡಿಸುವುದು.

ಅನ್ವೇಷಣೆಯನ್ನು ಮಾಡೋಣ

ಸಾಂದರ್ಭಿಕ ಚಿಂತನೆಯನ್ನು ವ್ಯಕ್ತಪಡಿಸಲು ಸಹಾಯ ಮಾಡುವುದು.

ಮೂರನೇ ತರಗತಿಯ ಮೊದಲನೇ ಅವಧಿ ಪಠ್ಯ ಪುಸ್ತಕವು ಎರಡು ಘಟಕಗಳ ಪುನರಾವರ್ತನೆಯಾಗುವ ವಿಧಾನದೊಂದಿಗೆ ರಚನೆಯಾಗಿದೆ

ಘಟಕ 1

- ಮೊದಲ ಹತ್ತು ದಿನಗಳಲ್ಲಿ ಪೂರ್ವ ಸಿದ್ಧತಾ ಪುಟಗಳ ಮೂಲಕ ಮೂಲಭೂತ ಸಂಖ್ಯಾಜ್ಞಾನ ಕೌಶಲಗಳನ್ನು ಬಲಪಡಿಸುವುದು ಮಕ್ಕಳು ತರಗತಿಯ ಕಲಿಕೆಗೆ ನುಸುಳುವಂತೆ ಮಾಡುವುದು.
- ಒಂದೇ ಆಕಾರದ ವಿಭಿನ್ನ ಸ್ಥಾನಗಳನ್ನು ತಿಳಿದುಕೊಳ್ಳುವುದು.
- 999ರ ವರಗಿನ ಸಂಖ್ಯೆಗಳನ್ನು ಓದುವುದು ಮತ್ತು ಬರೆಯುವುದು.
- 999ರ ವರಗಿನ ಸಂಖ್ಯೆಗಳನ್ನು ಹೇಳುವುದು.

ಘಟಕ 2

- 999ರ ವರಗಿನ ಸಂಖ್ಯೆಗಳ ಮೂಲ ಪ್ರಕ್ರಿಯೆಗಳನ್ನು ಮಾಡುವುದು.
- ನಿಖರವಾದ ಅಳತೆ ಸಾಧನಗಳನ್ನು ಬಳಸಿ ಉದ್ದವನ್ನು ಅಳೆಯುವುದು.

ಪಠ್ಯಪುಸ್ತಕದ ವಿಶೇಷ ಲಕ್ಷಣಗಳು

ಸಂಪೂರ್ಣ ಕಲಿಕೆ

ಕಲೆ, ದೈಹಿಕ ಚಲನ ಕೌಶಲ್ಯ, ಜೀವನ ಕೌಶಲ್ಯ ಮತ್ತು ಮೌಲ್ಯಗಳನ್ನು ಒಳಗೊಂಡು ಸಂಯೋಜಿಸಲಾಗಿದೆ.

ಕ್ಯೂ ಆರ್ ಕೋಡ್ ಸಂಪನ್ಮೂಲಗಳು

ಮಕ್ಕಳಿಗೆ ಅನುಭವದ ಕಲಿಕೆ ಸ್ವಯಂ ಕಲಿಕೆ ಮತ್ತು ವಿವಿಧ ಕಲಿಕಾ ವಿಧಾನಗಳನ್ನು ಒಳಗೊಂಡಿದೆ.

ಮೌಲ್ಯಮಾಪನ ಮತ್ತು ಪರಿಹಾರ ಬೋಧನೆ

ಪಠ್ಯ ಪುಸ್ತಕದಲ್ಲಿ ಒದಗಿಸಲಾದ ಅಭ್ಯಾಸಗಳು ಹಾಗೂ ಮುಕ್ತ ಪ್ರಶ್ನೆಗಳು ಮತ್ತು ಪರಿಶೋಧನೆಯ ಮೂಲಕ ತಾರ್ಕಿಕತೆ ವಿಶ್ಲೇಷಣಾತ್ಮಕ ಕೌಶಲ್ಯಗಳು, ಗಣಿತ ಪರಿಹಾರ ಕೌಶಲ್ಯಗಳು ಮತ್ತು 21ನೇ ಶತಮಾನದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ಕಲಿಕೆಯ ಪಯಣ

ಒಂದೊಂದು ಪಾಠದ ಕೊನೆಯಲ್ಲಿ ಕಲಿಕೆಯ ಸಾಧನೆಯ ಮಟ್ಟವನ್ನು ವೀಕ್ಷಣೆ ಮಾಡಲು ಪರಿಹಾರ ಬೋಧನೆಗಾಗಿ ಯೋಚಿಸಲು ಅನುಕೂಲ ಮಾಡಿಕೊಡುತ್ತದೆ.

ನಾನೇ ಮಾಡುವೆ

ಮೌಖಿಕ ಚಟುವಟಿಕೆಗಳು ಲಿಖಿತ ಚಟುವಟಿಕೆಗಳು ಮತ್ತು ಕಾರ್ಯ ಯೋಜನೆಗಳ ಮುಖಾಂತರ ಸಂಯೋಜಿಸಲಾದ ಕಲಿಕೆಗೆ ಪರಿಣಾಮಕಾರಿಯಾಗಿ ಮೌಲ್ಯಮಾಪನಕ್ಕೆ ಒಳಗೊಳ್ಳುವರು.

ಇಂದಿನ ತಾಂತ್ರಿಕವಾಗಿ ಮುಂದುವರಿದ ಸನ್ನಿವೇಶಗಳಲ್ಲಿ ಮಕ್ಕಳು ವಿವಿಧ ವೇದಿಕೆಗಳು ಮತ್ತು ಸಾಮಾಜಿಕ ಸಂವಹನಗಳ ಮೂಲಕ ಅನೇಕ ಅನುಭವಗಳನ್ನು ಪಡೆಯುತ್ತಾರೆ. ಇದಲ್ಲದೆ ಪಠ್ಯಪುಸ್ತಕಗಳು ಮಕ್ಕಳ ಗಣಿತ ಕೌಶಲ್ಯಗಳನ್ನು ಸುಧಾರಿಸಲು ಒಂದು ಸಂಪನ್ಮೂಲವಾಗಿದೆ. ಆದ್ದರಿಂದ ಮಕ್ಕಳ ಗಣಿತದ ಚಿಂತನೆಯನ್ನು ಸುಧಾರಿಸಲು ವಿಷಯವನ್ನು ಬಲಪಡಿಸಲು ಮತ್ತು ಜೀವನದ ಸಂದರ್ಭಗಳಲ್ಲಿ ವಿಷಯವನ್ನು ಪರಿಣಾಮಕಾರಿಯಾಗಿ ಅನ್ವಯಿಸಲು ಶಿಕ್ಷಕರು ವಿವಿಧ ರೀತಿಯ ಮೌಲ್ಯಮಾಪನ ಸಾಧನಗಳು, ಹೆಚ್ಚುವರಿ ಚಟುವಟಿಕೆಗಳು ಮತ್ತು ವಿವಿಧ ಕಲಿಕಾ ಸಂಪನ್ಮೂಲಗಳನ್ನು ಬಳಸಬೇಕೆಂದು ವಿನಂತಿಸಲಾಗಿದೆ.

ಪರಿವಿಡಿ

ಘಟಕ – 1

ಪಾಠಗಳು

1. ಬಣ್ಣ ಬಣ್ಣದ ಹೂವುಗಳು 1

2. ವಸ್ತುಗಳು ಮತ್ತು ಆಕಾರಗಳು 7

3. ಮಣಿಗಳು ಎಷ್ಟು? 15

4. ಯಾವುದು? ಎಲ್ಲಿ? 35

ಘಟಕ – 2

ಪಾಠಗಳು

5. ನನ್ನ ಆಸೆಗಳು 47

6. ಮೊತ್ತ ಎಷ್ಟು? 50

7. ಸರಿಯಾದ ಉದ್ದ... 59

8. ಉಳಿತಾಯವೆಷ್ಟು? 66

ಇ–ಪುಸ್ತಕ

ಐ ಪುಸ್ತಕ

ಘಟಕ
1

1. ಬಣ್ಣ ಬಣ್ಣದ ಹೂವುಗಳು

ಗೆಳತಿಯರಾದ ನಿತ್ಯ, ಇನಿಯ ಮತ್ತು ವನಿತಾ ಮೂವರು ಸಸ್ಯ ಶಾಸ್ತ್ರೀಯ ಉದ್ಯಾನವನ ಸುತ್ತಿ ನೋಡಲು ಹೋದರು.

ಚಿತ್ರವನ್ನು ನೋಡಿ ಉತ್ತರಿಸಿ.



1. ಚಿತ್ರದಲ್ಲಿರುವ ಮಕ್ಕಳ ಸಂಖ್ಯೆ _____.

2. ವಯಸ್ಕರರ ಪ್ರವೇಶ ಶುಲ್ಕದಲ್ಲಿ _____ ಹತ್ತುಗಳು ಇವೆ.

3. ಮಕ್ಕಳ ಪ್ರವೇಶ ಶುಲ್ಕದಲ್ಲಿ _____ ಒಂದುಗಳು ಇವೆ.

4. ಶಿಕ್ಷಕರ ಪ್ರವೇಶ ಶುಲ್ಕದಲ್ಲಿ _____ ಹತ್ತುಗಳು ಮತ್ತು _____ ಒಂದುಗಳು ಇವೆ.

5. ಶಾಲಾ ಮಕ್ಕಳ ಪ್ರವೇಶ ಶುಲ್ಕದಲ್ಲಿ _____ ಹತ್ತುಗಳು ಮತ್ತು _____ ಒಂದುಗಳು ಇವೆ.

6. ಮಕ್ಕಳ ಪ್ರವೇಶ ಶುಲ್ಕದಲ್ಲಿ 1 ರ ಸ್ಥಾನ ಬೆಲೆ _____.

7. ಛಾಯಾಚಿತ್ರ ಸಾಧನದ ಪ್ರವೇಶ ಶುಲ್ಕದಲ್ಲಿ 9 ರ ಸ್ಥಾನಬೆಲೆ _____.

8. ಮಕ್ಕಳ ಪ್ರವೇಶ ಶುಲ್ಕವನ್ನು _____ + 5 ಎಂದು ಬರೆಯಬಹುದು.



ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1 ಹೂವುಗಳನ್ನು ಎಣಿಸಿ ಬರೆಯಿರಿ.

⬚ ⬚ ⬚

2. ಹೂವುಗಳ ಸಂಖ್ಯೆಯಲ್ಲಿ _____ ಹತ್ತುಗಳು ಮತ್ತು _____ ಒಂದುಗಳು ಇವೆ.

3. ಹೂವುಗಳ ಸಂಖ್ಯೆಯಿಂದ ಮುಂದಿನ ಸಂಖ್ಯೆಗಳನ್ನು ಹೇಳಿ ಕೊಂಡು ಬರೆಯಿರಿ.

4. ಹೂಗವುಳ ಸಂಖ್ಯೆಯ ಹಿಂದಿನ ಸಂಖ್ಯೆಗಳನ್ನು ಹೇಳಿ ಕೊಂಡು ಬರೆಯಿರಿ.

5. ಹೂವುಗಳ ಸಂಖ್ಯೆ _____; ಅದರ ಮುಂದಿನ ಸಂಖ್ಯೆ ____ ಮತ್ತು ಹಿಂದಿನ ಸಂಖ್ಯೆ ____.

6. 20ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಹೂವುಗಳಿಗೆ ವೃತ್ತ ಹಾಕಿರಿ.

7. ಅತಿ ಹೆಚ್ಚಾಗಿ ಇರುವ ಹೂವಿನ ಸಂಖ್ಯೆಗೆ ವೃತ್ತ ಹಾಕಿ.

8. ಅತಿ ಚಿಕ್ಕ ಸಂಖ್ಯೆಯಲ್ಲಿರುವ ಹೂವಿಗೆ ವೃತ್ತ ಹಾಕಿ.



ಸರಿಯಾದ ಉತ್ತರಕ್ಕೆ (✓) ಹಾಕಿರಿ.

1. ಸಮತಟ್ಟಾದ ಆಕೃತಿಯನ್ನು ಹೊಂದಿರುವ ವಸ್ತು ಯಾವುದು?



☐ ☐ ☐ ☐

2. ಬಾಗಿದ ಮುಖವಿರುವ ವಸ್ತು ಯಾವುದು?

☐ ☐ ☐ ☐

3. -ಇದರ ನೆರಳಿನ ಚಿತ್ರ ಯಾವುದು?

☐ ☐ ☐ ☐

4. –ಇದನ್ನು ಅಚ್ಚು ಹಾಕಿದರೆ ದೊರೆಯುವ ವಸ್ತು ಯಾವುದು?

☐ ☐ ☐ ☐

5. ನೇರ ಅಂಚು ಇಲ್ಲದ ಆಕೃತಿ ಯಾವುದು?

☐ ☐ ☐ ☐

6. ಎಲ್ಲಾ ಬಾಹುಗಳು ಸಮವಾಗಿರುವ ಆಕೃತಿ ಯಾವುದು?

☐ ☐ ☐ ☐



ಉದ್ದವನ್ನು ಅಳೆಯುವ ಸರಿಯಾದ ಸಾಧನೆಕ್ಕೆ (✓) ಹಾಕಿರಿ.



ಸರಿಯಾದ ಚಿಹ್ನೆಯನ್ನು ↓ ↑ ಬಳಸಿ ತುಂಬಿರಿ.



ಸರಿಯಾದ ಪಾತ್ರೆಯನ್ನು ಬಳಸಿ ಬಹಳ ವೇಗವಾಗಿ ನೀರನ್ನು ತುಂಬಿಸಬಹುದಾದುದಕ್ಕೆ (✓) ಹಾಕಿರಿ.





ಗಿಡಗಳ ಬೆಲೆಯನ್ನು ಬರೆದು ತೋರಿಸಿ.

	ಹ	ಒ
ಮಲ್ಲಿಗೆ ಗಿಡದ ಬೆಲೆ		
ಗುಲಾಬಿ ಗಿಡದ ಬೆಲೆ +		
ಮೊತ್ತ ಬೆಲೆ		

	ಹ	ಒ
ಮಲ್ಲಿಗೆ ಗಿಡದ ಬೆಲೆ		
ಸೇವಂತಿ ಗಿಡದ ಬೆಲೆ +		
ಮೊತ್ತ ಬೆಲೆ		

	ಹ	ಒ
ಸೇವಂತಿ ಗಿಡದ ಬೆಲೆ		
ಸುಗಂಧರಾಜ ಗಿಡದ ಬೆಲೆ +		
ಮೊತ್ತ ಬೆಲೆ		

	ಹ	ಒ
ಗುಲಾಬಿ ಗಿಡದ ಬೆಲೆ		
ಸೇವಂತಿ ಗಿಡದ ಬೆಲೆ +		
ಮೊತ್ತ ಬೆಲೆ		

	ಹ	ಒ
ದಾಸವಾಳ ಗಿಡದ ಬೆಲೆ		
ಗುಲಾಬಿ ಗಿಡದ ಬೆಲೆ +		
ಮೊತ್ತ ಬೆಲೆ		

	ಹ	ಒ
ಸುಗಂಧರಾಜ ಗಿಡದ ಬೆಲೆ		
ಗುಲಾಬಿ ಗಿಡದ ಬೆಲೆ +		
ಮೊತ್ತ ಬೆಲೆ		



ಗಿಡಗಳ ಬೆಲೆಯನ್ನು ಬರೆದು ಉಳಿದ ಹಣವನ್ನು ಕಂಡುಹಿಡಿರಿ.

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	6	0
ಗುಲಾಬಿ ಗಿಡದ ಬೆಲೆ –		
ಉಳಿದ ಹಣ		

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	4	0
ಮಲ್ಲಿಗೆ ಗಿಡದ ಬೆಲೆ –		
ಉಳಿದ ಹಣ		

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	5	0
ದಾಸವಾಳ ಗಿಡದ ಬೆಲೆ –		
ಉಳಿದ ಹಣ		

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	3	0
ಸುಗಂಧರಾಜ ಗಿಡದ ಬೆಲೆ –		
ಉಳಿದ ಹಣ		

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	5	0
ಸೇವಂತಿ ಗಿಡದ ಬೆಲೆ -		
ಉಳಿದ ಹಣ		

	ಹ	ಒ
ಅಂಗಡಿಯವರಿಗೆ ಕೊಟ್ಟ ಹಣ	2	0
ದಾಸವಾಳ ಗಿಡದ ಬೆಲೆ –		
ಉಳಿದ ಹಣ		

2. ವಸ್ತುಗಳು ಮತ್ತು ಆಕಾರಗಳು

ಕಲಿಯೋಣ

ಮಾಡಿ ನೋಡೋಣ

ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ. ಶಂಖಾಕೃತಿ, ಘನಚದುರ, ಘನಆಯತ, ಸಿಲಿಂಡರ್ ಮತ್ತು ಗೋಳಾಕಾರ ಒಂದು ನಿರ್ದಿಷ್ಟ ಸ್ಥಳದಲ್ಲಿ ಇಟ್ಟು ತೋರಿಸುವುದು ಮತ್ತು ಮತ್ತೊಂದು ಮಗು ಅದಕ್ಕೆ ತಕ್ಕ ಹಾಗೆ ವಸ್ತುವನ್ನು ಇಟ್ಟು ತೋರಿಸಬೇಕು.

ಅಭ್ಯಾಸ ಮಾಡೋಣ

ಒಂದೇ ಆಕಾರದಲ್ಲಿರುವ ವಸ್ತುಗಳಿಗೆ ಗೆರೆ ಎಳೆದು ಹೊಂದಿಸು.



ಅಭ್ಯಾಸ ಮಾಡೋಣ

ಒಂದೇ ರೀತಿ ಇರುವ ಆಕಾರಗಳಿಗೆ ಹೊಂದಿಸು.



ಒಂದೇ ರೀತಿ ಇರುವ ಆಕಾರಗಳಿಗೆ ಒಂದೇ ರೀತಿಯ ಬಣ್ಣವನ್ನು ಹಚ್ಚು.



ಆಕಾರಗಳ ಮೆರವಣಿಗೆ


ನನಗೆ 6 ಸಮತಟ್ಟಾದ ಮುಖಗಳು ಇವೆ.
ನನಗೆ 12 ನೇರ ಅಂಚುಗಳು ಇವೆ.
ನನಗೆ 8 ಶೃಂಗಗಳು ಇವೆ.
ಆಯತ
ನನಗೆ 6 ಸಮತಟ್ಟಾದ ಮುಖಗಳು ಇವೆ.
ನನಗೆ 12 ನೇರ ಅಂಚುಗಳು ಇವೆ.
ನನಗೆ 8 ಶೃಂಗಗಳು ಇವೆ.
ಘನ ಚದುರ
ನನಗೆ 1 ಸಮತಟ್ಟಾದ ಮುಖ ಇದೆ.
ನನಗೆ 1 ಬಾಗಿದ ಮೇಲ್ಮೈ 1 ಅಂಚು ಇದೆ.
ನನಗೆ ಒಂದು ಶೃಂಗವಿದೆ.
ಸಿಲಿಂಡರ್
ನನಗೆ ಎರಡು ಸಮತಟ್ಟಾದ ಮೇಲ್ಮೈ ಇದೆ.
ನನಗೆ 1 ಬಾಗಿದ ಮೇಲ್ಮೈ ಇದೆ.
2ಬಾಗಿದ ಅಂಚುಗಳು ಇವೆ.
ನನಗೆ ಶೃಂಗಗಳು ಇಲ್ಲ.
ಉರುಳುವ ಸಾಧನ
ನನಗೆ 1 ಬಾಗಿದ ಮೇಲ್ಮೈ ಮಾತ್ರ ಇದೆ
ನನಗೆ ಶೃಂಗಗಳು, ಅಂಚುಗಳು ಇಲ್ಲ.
ಗೋಳ

ಮಾಡಿ ನೋಡೋಣ

ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು. ಒಂದು ಗುಂಪಿನವರು ಯಾವುದಾದರೂ ಒಂದು ಆಕೃತಿಯನ್ನು ತೋರಿಸಿದಾಗ ಮತ್ತೊಂದು ಗುಂಪಿನವರು ಆಕೃತಿಯ ಮುಖಗಳು, ಶೃಂಗಗಳು ಮತ್ತು ಅಂಚುಗಳು ಸಂಖ್ಯೆಗಳನ್ನು ಸರಿಯಾಗಿ ಹೇಳಬೇಕು.

ಅಭ್ಯಾಸ ಮಾಡೋಣ

ಆಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಪಟ್ಟಿಯನ್ನು ತುಂಬಿರಿ.

ಆಕೃತಿಗಳು	ಮುಖಗಳ ಸಂಖ್ಯೆಗಳು		ಅಂಚುಗಳ ಸಂಖ್ಯೆ		ಶೃಂಗಗಳ ಸಂಖ್ಯೆ
	ಸಮತಟ್ಟಾಗಿರುವುದು	ವಕ್ರವಾಗಿರುವುದು	ನೇರವಾಗಿರುವುದು	ವಕ್ರವಾಗಿರುವುದು	
	6	—	12	—	8
					
					

ಅಭ್ಯಾಸ ಮಾಡೋಣ

ಕಂಡುಹಿಡಿದು ಹೊಂದಿಸಿ.

ನನಗೆ ಅಂಚುಗಳು
ಶೃಂಗಗಳು ಇಲ್ಲ.



ಸಿಲಿಂಡರ್

ನನಗೆ 6 ಸಮತಟ್ಟಾದ ಮುಖಗಳು
12 ನೇರ
ಅಂಚುಗಳು ಇರುವುದು.



ಗೋಳ

ನನಗೆ 2 ವಕ್ರ ರೇಖೆಗಳು
ಅಂಚುಗಳು ಇರುವುದು.



ಘನಾಕೃತಿ

ನನಗೆ ಒಂದೇ ಒಂದು
ಶೃಂಗ ಮಾತ್ರ ಇದೆ.



ಕೋನಾಕೃತಿ

ಮಾಡಿ ನೋಡೋಣ

ಈ ರೋಬೋ ಗೊಂಬೆಯಲ್ಲಿರುವ ಆಕಾರಗಳ ಹೆಸರುಗಳನ್ನು ಹೇಳಿರಿ ಅದೇ ಆಕಾರಗಳನ್ನು ಉಪಯೋಗಿಸಿ, ಹೊಸ ಗೊಂಬೆಗಳನ್ನು ರಚನೆ ಮಾಡಿರಿ.

ಅಭ್ಯಾಸ ಮಾಡೋಣ

ಮಾದರಿಗಳನ್ನು ಬಳಸಿಕೊಂಡು ಆಕಾರಗಳಿಗೆ ಬಣ್ಣ ಹಚ್ಚಿರಿ.

ಮಾದರಿಗಳು	ಆಕಾರಗಳು
	
	
	
	

ಅನ್ವೇಷಿಸಿ ತಿಳಿಯೋಣ

ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಘನ ಚದುರ ಮತ್ತು ಸಿಲಿಂಡರ್‌ನ ಆಕೃತಿಯನ್ನು ಸೇರಿಸಿ ರಚನೆಯಾದ ಮಾದರಿ ಯಾವುದು?

(ಅ) 
(ಆ) 
(ಇ)
(ಈ)

2. ಚಿತ್ರದಲ್ಲಿರುವ ಮಾದರಿಯನ್ನು ರಚಿಸಲು ಯಾವ ಗುಂಪನ್ನು ಉಪಯೋಗಿಸಬೇಕು?



(ಅ) 12 ಘನಚದುರಗಳು
(ಆ) 4 ಘನಚದುರಗಳು
(ಇ) 6 ಘನಚದುರಗಳು
(ಈ) 2 ಘನಚದುರಗಳು

3. ಒಂದು ರಾಕೆಟ್‌ನ ಮಾದರಿಯನ್ನು ರಚಿಸಲು ಯಾವ ಗುಂಪನ್ನು ಉಪಯೋಗಿಸಬೇಕು?

(ಅ)
(ಆ) 
(ಇ) 
(ಈ)

ಮಾಡಿ ನೋಡೋಣ

ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ ಕೊಟ್ಟಿರುವ ಆಕಾರಗಳನ್ನು ಬಳಸಿಕೊಂಡು ಯಾವುದಾದರೂ ಒಂದು ಆಕಾರವನ್ನು ರಚಿಸುವಂತೆ ಮಾಡಿ ಗುಂಪಿನಲ್ಲಿ ಚರ್ಚಿಸುವಂತೆ ಮಾಡುವುದು.

ಅಭ್ಯಾಸ ಮಾಡೋಣ

ಕೆಳಗಿನ ಚಿತ್ರವನ್ನು ಪೂರ್ಣಗೊಳಿಸುವ ಆಕಾರಕ್ಕೆ (✓) ಹಾಕಿರಿ.

1. 

2. 

3. 

ಕಲಿಕಾ ಪಯಣ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಒಂದೇ ರೀತಿ ಇರುವ ಆಕಾರಗಳಿಗೆ ವೃತ್ತ ಹಾಕಿರಿ.

2. ಕೆಳಗೆ ಕೊಟ್ಟಿರುವ ಮಾದರಿಯಲ್ಲಿ ಯಾವ ಆಕೃತಿಯನ್ನು ಬಳಸಲಾಗಿಲ್ಲ?



(ಅ) ಸಿಲಿಂಡರ್ (ಆ) ಉರುಳುವ ಸಾಧನ (ಇ) ಘನ ಚದುರ (ಈ) ಗೋಳ

3 ಎರಡು ಸಮತಟ್ಟಾದ ಮುಖವನ್ನು ಮಾತ್ರ ಹೊಂದಿರುವ ಆಕೃತಿಗೆ ವೃತ್ತ ಹಾಕಿರಿ.

(ಅ) (ಆ) (ಇ) (ಈ)

4 ಒಂದೇ ಒಂದು ವಕ್ರರೇಖೆ ಮತ್ತು ಶೃಂಗವನ್ನು ಹೊಂದಿರುವ ಆಕೃತಿಗೆ ವೃತ್ತ ಹಾಕಿರಿ.

(ಅ) (ಆ) (ಇ) (ಈ)

5 ಅನುಕ್ರಮದಲ್ಲಿ ಮುಂದೆ ಬರುವ ಆಕೃತಿ ಯಾವುದು?



(ಅ)  (ಆ) (ಇ) (ಈ)

ನಾನು ಕಲಿತದ್ದು

ನನ್ನಿಂದ,

ಒಂದೇ ಆಕೃತಿಯಲ್ಲಿ ಬದಲಾದ ಹಂತಗಳನ್ನು ಕಂಡುಹಿಡಿಯಲು ಸಾಧ್ಯ. ☐

ಆಕೃತಿಗಳ ಲಕ್ಷಣಗಳನ್ನು ತಿಳಿಯಲು ಸಾಧ್ಯ. ☐

ಆಕೃತಿಗಳನ್ನು ಬಳಸಿಕೊಂಡು ಹೊಸ ಮಾದರಿಗಳನ್ನು ರಚಿಸಲು ಸಾಧ್ಯ. ☐

ಆಕೃತಿಗಳ ಗುಂಪುಗಳನ್ನು ರಚಿಸಲು ಸಾಧ್ಯ. ☐

3. ಮಣಿಗಳು ಎಷ್ಟು?

ಕಲಿಯೋಣ

ರಾಹುಲ್ ನೀನು ತೆಗೆದುಕೊಂಡ ಅಂಕಗಳು 97 ಮುಂದಿನ ಪರೀಕ್ಷೆಯಲ್ಲಿ ಪೂರ್ಣ ಅಂಕಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಬೇಕು.

100/100



ರಾಹುಲ್ ಮುಂದಿನ ಪರೀಕ್ಷೆಯಲ್ಲಿ ಸಂಪೂರ್ಣ ಅಂಕಗಳನ್ನು ತೆಗೆದುಕೊಳ್ಳಬೇಕಾದರೆ ಇನ್ನು ಎಷ್ಟು ಅಂಕಗಳನ್ನು ತೆಗೆದುಕೊಳ್ಳಬೇಕು?

ಇಂದಿನ ಪಂದ್ಯದಲ್ಲಿ ನಾನು ಶತಕವನ್ನು ಗಳಿಸಬೇಕು...



ಕ್ರಿಕೆಟ್ ಆಟವಾಡುವವರು ಶತಕ ಗಳಿಸಲು ಬೇಕಾಗಿರುವ ರನ್ನುಗಳು ಎಷ್ಟು?

99 ರವರೆಗೆ ಎಣಿಸೋಣವೇ.

ಅಲ್ಲಿಗೆ ಒಂದನ್ನು ಸೇರಿಸಿದರೆ 100.



99ಕ್ಕೆ 1 ನ್ನು ಸೇರಿಸಿದರೆ 100 ಆಗುವುದು.



ಹತ್ತರ 10 ಮಣಿಸರಗಳನ್ನು ಸೇರಿಸಿ 100 ಮಣಿಗಳ ಗುಂಪುಗಳನ್ನು ಒಳಗೊಂಡ ಒಂದು 100 ಮಣಿ ಕಟ್ಟನ್ನು ರಚಿಸಬಹುದು.

1 ನೂರು = 10 ಹತ್ತುಗಳು = 100 ಒಂದುಗಳು

ಮಾಡಿ ನೋಡೋಣ



ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ. 10ರ ಮಣಿಸರಗಳನ್ನು ನೀಡಿ ಅವುಗಳಿಂದ ವಿವಿಧ ರೀತಿಯ 100 ಮಣಿಸರಗಳನ್ನು ರಚಿಸಲು ಪ್ರೋತ್ಸಾಹಿಸಬೇಕು.

ಅಭ್ಯಾಸ ಮಾಡೋಣ

100ನ್ನು ರಚಿಸುವ 10ರ ಮಣಿ ಸರಗಳನ್ನು ಹೊಂದಿಸಿರಿ.



100 ನ್ನು ರಚಿಸುವ ಸಂಖ್ಯೆಗಳನ್ನು ಬರೆಯಿರಿ.



ಮಾಡಿ ನೋಡೋಣ

ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ. ಒಂದೊಂದು ಗುಂಪಿಗೂ 10 ಕಡ್ಡಿಗಳು ಇರುವಂತೆ ಒಂಬತ್ತು ಕಡ್ಡಿಗಳನ್ನು ಒಳಗೊಂಡ ಮತ್ತು 10 ಬಿಡಿಬಿಡಿಯಾದ ಕಡ್ಡಿಗಳನ್ನು ಕೊಡುವುದು.

ಅಭ್ಯಾಸ ಮಾಡೋಣ

100 ನ್ನು ರಚಿಸುವ ಕಡ್ಡಿಗಳನ್ನು ಹೊಂದಿಸಿರಿ.



ಕಲಿಯೋಣ

ಸಂಖ್ಯೆಗಳ ಹೆಸರು (100–900)

100 ಮಣಿಕಟ್ಟುಗಳು	ಸಂಖ್ಯೆ	ಸಂಖ್ಯೆಗಳ ಹೆಸರು
	100	ನೂರು
	200	ಇನ್ನೂರು
	300	ಮುನ್ನೂರು
	400	ನಾನೂರು
	500	ಐನೂರು
	600	ಆರುನೂರು
	700	ಏಳುನೂರು
	800	ಎಂಟುನೂರು
	900	ಒಂಬೈನೂರು

ಒಂದು 100ರ ಮಣಿ ಕಟ್ಟಿನ ಜೊತೆ ಮತ್ತೊಂದು 100ರ ಮಣಿಕಟ್ಟನ್ನು ಸೇರಿಸಿದಾಗ 200 ಎಂದು ಮತ್ತು ಒಂದು ನೂರು ಮಣಿಕಟ್ಟನ್ನು ಸೇರಿಸಿದಾಗ 300 ಎಂದು, ಮುಂದುವರಿದು 900 ವರೆಗೆ ನೂರರ ಮಣಿಕಟ್ಟುಗಳನ್ನು ಸೇರಿಸಿ ಅವುಗಳ ಹೆಸರನ್ನು ಪರಿಚಯ ಮಾಡುವುದು.

ಅಭ್ಯಾಸ ಮಾಡೋಣ

ಮಣಿಕಟ್ಟುಗಳನ್ನು ಸಂಖ್ಯೆಗಣಗುಣವಾಗಿ ಹೊಂದಿಸಿ.



ಅಭ್ಯಾಸ ಮಾಡೋಣ

ಬಿಟ್ಟು ಹೋಗಿರುವ ನೂರುಗಳನ್ನು ಬರೆಯಿರಿ.

ಕೆಳಗಿನ ಪಟ್ಟಿಯನ್ನು ಪೂರ್ತಿ ಮಾಡಿರಿ.

ಸಂಖ್ಯೆ	ಸಂಖ್ಯೆಗಳ ಹೆಸರು
200	
	ಆರುನೂರು
700	

ಸಂಖ್ಯೆ	ಸಂಖ್ಯೆಗಳ ಹೆಸರು
	ಮುನ್ನೂರು
900	
	ಎಂಟುನೂರು

ಕಲಿಯೋಣ

10 ಒಂದು ರೂಪಾಯಿ ನಾಣ್ಯಗಳ ಬೆಲೆ ಒಂದು ಹತ್ತು ರೂಪಾಯಿ ನಾಣ್ಯಕ್ಕೆ ಸಮ ಎಂದು ನಿಮಗೆ ಗೊತ್ತು ಅದೇ ರೀತಿ 1 ಹತ್ತು ರೂಪಾಯಿ ನಾಣ್ಯಗಳ ಬೆಲೆ, 1 ನೂರು ರೂಪಾಯಿ ನಾಣ್ಯಗಳ ಬೆಲೆಗೆ ಸಮ ಎಂದು ನಿಮಗೆ ಗೊತ್ತೇ?

1 ಹತ್ತು = 10 ಒಂದುಗಳು

1 ನೂರು = 10 ಹತ್ತುಗಳು = 100 ಒಂದುಗಳು

ಅಭ್ಯಾಸ ಮಾಡೋಣ

ಹಣವನ್ನು ಅದರ ಬೆಲೆಗೆ ತಕ್ಕಂತೆ ಹೊಂದಿಸಿ.

ಹಣ	ಬೆಲೆ
	321
	125
	212

ಅಭ್ಯಾಸ ಮಾಡೋಣ

ಹಣದ ಬೆಲೆಯನ್ನು ಬರೆಯಿರಿ.

ಹಣ	ಬೆಲೆ

ಕಲಿಯೋಣ

ಸಂಖ್ಯೆಗಳನ್ನು ಓದುವುದು ಹೇಗೆ?



1 ನೂರು ನೂರು...

2 ಹತ್ತುಗಳು ಇಪ್ಪತ್ತು...

5 ಒಂದುಗಳು ಐದು...

ನೂರಇಪ್ಪತ್ತೈದು...

ಮಾಡಿ ನೋಡೋಣ

ಒಂಬತ್ತು 100ರ ಮಣಿಸರಗಳು ಒಂಬತ್ತು 10ರ ಮಣಿಸರಗಳು ಮತ್ತು 9ರ ಬಿಡಿಯಾದ ಮಣಿಗಳನ್ನು ವಿದ್ಯಾರ್ಥಿಗಳ ಹತ್ತಿರ ನೀಡಿ. ಮೂರು ಅಂಕಿಗಳ ಸಂಖ್ಯೆಗಳನ್ನು ತಾವೇ ರಚಿಸಿ ಅವುಗಳ ಸಂಖ್ಯೆ ಮತ್ತು ಸಂಖ್ಯೆಯ ಹೆಸರುಗಳನ್ನು ಹೇಳುವಂತೆ ಮಾಡುವುದು.

ಅಭ್ಯಾಸ ಮಾಡೋಣ

ಪಟ್ಟಿಯನ್ನು ಭರ್ತಿ ಮಾಡಿ.

ಮಣಿಗಳು	ನೂ	ಹ	ಒ	ಸಂಖ್ಯೆ		ಸಂಖ್ಯೆಗಳ ಹೆಸರು
	1	0	1	100 + 0 + 1	101	ನೂರೊಂದು
						
						
						
						
						
						
						
						
						

ಅಭ್ಯಾಸ ಮಾಡೋಣ

ಪಟ್ಟಿಯನ್ನು ಭರ್ತಿ ಮಾಡಿ.

ನೂ	ಹ	ಒ	ಸಂಖ್ಯೆ		ಸಂಖ್ಯೆಗಳ ಹೆಸರು
1	7	8	100 + 70 + 8	178	ನೂರಎಂಬತ್ತೆಂಟು
1	2	5			
1	4	7			
2	9	4			
2	6	3			
2	3	9			
3	5	6			
3	8	2			
3	4	5			
3	7	3			

ಅಭ್ಯಾಸ ಮಾಡೋಣ

ಸಂಖ್ಯೆಗಳನ್ನು ಓದಿ ತೋರಿಸಿ.



ಪಟ್ಟಿಯನ್ನು ಭರ್ತಿ ಮಾಡಿ.

101								109	
			114						120
		123					128		
	132								140
				145		147			
151					156				
			164					169	
	172						178		
		183							190
			194					199	200

ಹೊಂದಿಸಿ ಬರೆಯಿರಿ.

3 ನೂರುಗಳು	317
2 ನೂರುಗಳು 6 ಒಂದುಗಳು	300
1 ನೂರು 4 ಹತ್ತುಗಳು 2 ಒಂದುಗಳು	210
3 ನೂರುಗಳು 1 ಹತ್ತು 7 ಒಂದುಗಳು	142
2 ನೂರುಗಳು 1 ಹತ್ತು	206

ಅಭ್ಯಾಸ ಮಾಡೋಣ

ಬಿಟ್ಟು ಹೋದ ಸಂಖ್ಯೆಗಳನ್ನು ಬರೆದು, ಬೆಕ್ಕು ತನ್ನ ಮನೆಗೆ ಹೋಗಲು ದಾರಿಯನ್ನು ತೋರಿಸಿ.

201 202 203 207 208 214 215 221 222 228 229 232 236 243 237 244 250

ಪಟ್ಟಿಯನ್ನು ಭರ್ತಿ ಮಾಡಿ.

301							308		
				315					
						327			
		333							
					346				
							358		
						367			
	372								
			384						
									400

ಅಭ್ಯಾಸ ಮಾಡೋಣ

ಮಣಿಗಳನ್ನು ಎಣಿಸಿ ಅವುಗಳ ಸಂಖ್ಯೆ ಮತ್ತು ಸಂಖ್ಯೆಯ ಹೆಸರನ್ನು ಬರೆಯಿರಿ.

ಮಣಿಗಳು	ನೂ	ಹ	ಒ	ಸಂಖ್ಯೆ	ಸಂಖ್ಯೆಗಳ ಹೆಸರು
	2	1	8	218	ಇನ್ನೂರಹದಿನೆಂಟು
					
					
					
					

ಪಟ್ಟಿಯನ್ನು ಭರ್ತಿ ಮಾಡಿ.

ನೂ	ಹ	ಒ	ಸಂಖ್ಯೆ		ಸಂಖ್ಯೆಗಳ ಹೆಸರು
2	8	7	200 + 80 + 7	287	ಇನ್ನೂರ ಎಂಬತ್ತೇಳು
1	0	9			
2	6	1			
3	9	9			
2	1	5			
1	8	0			
3	7	5			

ಅಭ್ಯಾಸ ಮಾಡೋಣ

ಪಟ್ಟಿಯನ್ನು ಭರ್ತಿ ಮಾಡಿ.

ನೂ	ಹ	ಒ	ಸಂಖ್ಯೆ		ಸಂಖ್ಯೆಗಳ ಹೆಸರು
4	9	3	400 + 90 + 3	493	ನಾನೂರ ತೊಂಬತ್ಮೂರು
4	6	5			
4	0	8			
5	5	4			
5	3	0			
5	7	9			
6	4	6			
6	8	2			
6	1	5			
6	7	3			

ಅಭ್ಯಾಸ ಮಾಡೋಣ

ಸಂಖ್ಯೆಗಳನ್ನು ಓದಿ ಹೇಳಿರಿ.

432 467 610 575 586 666 504 582 468 444 628 497 681 653 699

ಪಟ್ಟಿಯನ್ನು ಭರ್ತಿ ಮಾಡಿ.

401									
						417			
	422								
				435					
		443							
					456				
461									
		473							
							488		
			494						500

500 ರಿಂದ **550**ರವರೆಗೆ ಸಂಖ್ಯೆಗಳನ್ನು ಕ್ರಮಪಡಿಸಿ ಬಣ್ಣ ಹಚ್ಚಿ ಮೊಲವು ಕ್ಯಾರೆಟ್‌ನ್ನು ತಲುಪಲು ಸಹಾಯ ಮಾಡಿ.

501 502 503 504 505 506 507 508 591 592 563
540 539 538 537 536 511 510 509 521 530 560
517 516 515 514 513 512 571 572 583 584 585
518 519 520 521 522 523 524 525 526 545 544
537 538 539 540 541 542 543 544 528 527 555
536 535 534 533 532 531 530 529 545 557 556
537 540 539 542 541 544 582 583 584 585 586
538 539 540 541 542 543 599 598 597 596 595
560 570 580 590 544 545 546 547 548 549 550

ಅಭ್ಯಾಸ ಮಾಡೋಣ

ಹೊಂದಿಸಿ ಬರೆಯಿರಿ.

400 + 40 + 5	259
500 + 70 + 9	320
200 + 50 + 9	609
300+ 20 + 0	579
600+ 0 + 9	445

ಪಟ್ಟಿಯನ್ನು ಭರ್ತಿ ಮಾಡಿ.

425	4 ನೂರುಗಳು	2 ಹತ್ತುಗಳು	5 ಒಂದುಗಳು
473			
502			
596			
640			

ಪಟ್ಟಿಯನ್ನು ಭರ್ತಿ ಮಾಡಿ.

601									
	612								
					626				
		633							
							648		
651								659	
			664						
					676				
							688		
						697			700

ಅಭ್ಯಾಸ ಮಾಡೋಣ

ಪಟ್ಟಿಯನ್ನು ಭರ್ತಿ ಮಾಡಿ.

ನೂ	ಹ	ಒ	ಸಂಖ್ಯೆ		ಸಂಖ್ಯೆಗಳ ಹೆಸರು
7	3	7	700 + 30 + 7	737	ಏಳುನೂರ ಮೂವತ್ತೇಳು
7	5	6			
7	7	7			
8	4	1			
8	7	3			
8	9	5			
9	6	4			
9	0	8			
9	5	1			
9	9	9			

ಅಭ್ಯಾಸ ಮಾಡೋಣ

ಸಂಖ್ಯೆಗಳನ್ನು ಓದಿ ಹೇಳಿರಿ.

727 901 792 950 899 999 816 758 888 838 786 924 811 910 989

ವಿಸ್ತರಣಾ ರೂಪದಲ್ಲಿ ಬರೆಯಿರಿ.

ವಿಸ್ತರಣಾ ರೂಪ	ಸುಲಭ ರೂಪ
900 + 90 + 1	991
700 + 65 + 5	
800 + 70 + 0	
700 + 50 + 6	
900 + 200 + 4	

ವಿಸ್ತರಿಸಿ ಬರೆಯಿರಿ.

ಸುಲಭ ರೂಪ	ವಿಸ್ತರಣಾ ರೂಪ
812	800 + 10 + 2
734	
808	
987	
912	

ಮಣಿಗಳನ್ನು ಎಣಿಸಿ ಬರೆಯಿರಿ.

ಮಣಿಗಳು	ಸಂಖ್ಯೆ
	715
	
	
	

ಅಭ್ಯಾಸ ಮಾಡೋಣ

ಪಟ್ಟಿಯನ್ನು ಭರ್ತಿ ಮಾಡಿ.

901									
		923							
				945					
					966				
							988		

ಗೆರೆ ಹಾಕಿದ ಸ್ಥಳವನ್ನು ಭರ್ತಿ ಮಾಡಿ.

1) 7 ನೂರುಗಳು 4 ಹತ್ತುಗಳು ಮತ್ತು 9 ಒಂದುಗಳು ಹೊಂದಿರುವ ಸಂಖ್ಯೆ _____

2) 8 ನೂರುಗಳು 7 ಹತ್ತುಗಳು ಮತ್ತು 2 ಒಂದುಗಳು ಹೊಂದಿರುವ ಸಂಖ್ಯೆ _____

3) 8 ನೂರುಗಳು ಮತ್ತು 9 ಹತ್ತುಗಳು ಹೊಂದಿರುವ ಸಂಖ್ಯೆ _____.

4) 9 ನೂರುಗಳು ಮತ್ತು 5 ಒಂದುಗಳು ಹೊಂದಿರುವ ಸಂಖ್ಯೆ _____.

5) 9 ನೂರುಗಳು ಮತ್ತು 9 ಹತ್ತುಗಳು ಹೊಂದಿರುವ ಸಂಖ್ಯೆ _____.

ಮಾಡಿ ನೋಡೋಣವೇ



ವಿದ್ಯಾರ್ಥಿಗಳ ಹತ್ತಿರ ನೂರುಗಳು (100, 200,..., 900), ಹತ್ತುಗಳು (10, 20,..., 90) ಮತ್ತು ಒಂದುಗಳು (0, 1,..., 9) ಸಂಖ್ಯಾ ರಟ್ಟುಗಳ ಸಮೂಹವನ್ನು ಕೊಟ್ಟು ಚಿತ್ರದಲ್ಲಿರುವಂತೆ ಮೂರು ಅಂಕಿಗಳ ಸಂಖ್ಯೆಗಳನ್ನು ರಚಿಸಲು ಅಭ್ಯಾಸ ಮಾಡಿಸುವುದು.

ಅಭ್ಯಾಸ ಮಾಡೋಣ

ಸಂಖ್ಯಾ ರಟ್ಟುಗಳು ತೋರಿಸುವ ಮೂರು ಅಂಕಿಯ ಸಂಖ್ಯೆಯನ್ನು ಬರೆಯಿರಿ.

700 10 9	300 40 4	900 90 6
719		
200 30 8	100 2	400 70 3

ಗೆರೆ ಹಾಕಿದ ಸಂಖ್ಯೆಯ ಸ್ಥಾನ ಬೆಲೆಯನ್ನು ಬರೆಯಿರಿ.

84<u>5</u>	5 ಒಂದುಗಳು	<u>9</u>45	9 ನೂರುಗಳು
<u>1</u>12		2<u>1</u>1	
5<u>6</u>7		<u>7</u>56	
3<u>3</u>4	3 ಹತ್ತುಗಳು	4<u>4</u>2	
90<u>0</u>		65<u>0</u>	

ಮೂರು ಅಂಕಿಯ ಸಂಖ್ಯೆಗಲ್ಲಿನ ಅಂಕಿಗಳಸ್ಥಾನ ಬೆಲೆಯನ್ನು ತಿಳಿದುಕೊಳ್ಳಲು ಪ್ರೇರೇಪಿಸುವುದು.

ಸಂಖ್ಯಾ ರಟ್ಟುಗಳು ತೋರಿಸುವ ಸಂಖ್ಯೆಯನ್ನು ಬರೆಯಿರಿ.

ಸಂಖ್ಯಾ ರಟ್ಟುಗಳು	ಸಂಖ್ಯೆ
100 100 100 10 10 10 10 10 1 1 1 1	354
100 100 10 10 1 1 1 1 1 1 1	
100 10 10 10 10 10 10 10 10 10 1 1 1	
100 100 100 100 100 100 100 10 10 10 1	
100 100 100 100 100 100 100 100 10 10 1	

ಅನ್ವೇಷಿಸಿ ತಿಳಿಯೋಣ

ನನ್ನ ಸಂಖ್ಯೆಗಳಿಗೆ ಅನುಗುಣವಾಗಿ ಸಂಖ್ಯಾ ರಟ್ಟುಗಳಿಗೆ ಬಣ್ಣ ಹಚ್ಚಿರಿ.

ಸಂಖ್ಯೆ	ಸಂಖ್ಯಾ ರಟ್ಟುಗಳು
729	100 100 100 100 100 100 100 100 100 / 10 10 10 10 10 10 10 10 10 / 1 1 1 1 1 1 1 1 1
987	100 100 100 100 100 100 100 100 100 / 10 10 10 10 10 10 10 10 10 / 1 1 1 1 1 1 1 1 1
645	100 100 100 100 100 100 100 100 100 / 10 10 10 10 10 10 10 10 10 / 1 1 1 1 1 1 1 1 1

ಗೆರೆ ಹಾಕಿದ ಸ್ಥಳವನ್ನು ಭರ್ತಿ ಮಾಡಿ.

1. 293 ರಲ್ಲಿ ಒಂದರ ಸ್ಥಾನದಲ್ಲಿರುವ ಸಂಖ್ಯೆಯ ಸ್ಥಾನಬೆಲೆ _____.
2. 867 ರಲ್ಲಿ ಹತ್ತರ ಸ್ಥಾನದಲ್ಲಿರುವ ಸಂಖ್ಯೆಯ ಸ್ಥಾನಬೆಲೆ _____.
3. 687 ರಲ್ಲಿ ನೂರರ ಸ್ಥಾನದಲ್ಲಿರುವ ಸಂಖ್ಯೆಯ ಸ್ಥಾನಬೆಲೆ _____.
4. 876 ರಲ್ಲಿ _____ ನೂರುಗಳು _____ ಹತ್ತುಗಳು ಮತ್ತು _____ ಒಂದುಗಳು ಇವೆ.
5. 932 ರಲ್ಲಿ _____ ನೂರುಗಳು _____ ಹತ್ತುಗಳು ಮತ್ತು _____ ಒಂದುಗಳು ಇವೆ.

ನಾನು ಯಾರು? ಕಂಡುಹಿಡಿ.

ನಾನು 500 ಮತ್ತು 600 ನಡುವೆ ಇರುವೆನು, ನನ್ನ ಹತ್ತಿರ ಆರು ಹತ್ತುಗಳು ಮೂರು ಒಂದುಗಳು ಇರುವುದು. [ ]

ನಾನು ನೂರುಗಳ ಸ್ಥಾನದಲ್ಲಿ ದೊಡ್ಡ ಸಂಖ್ಯೆ ಆಗಿರುವೆನು ನನ್ನ ಹತ್ತಿರ ಒಂದುಗಳು ಹತ್ತುಗಳು ಇಲ್ಲ. [ ]

ನಾನು ಅತಿ ಚಿಕ್ಕ ಮೂರು ಅಂಕಿಯ ಸಂಖ್ಯೆ. [ ]

ಕಲಿಕಾ ಪಯಣ

1) 100 ನ್ನು ರಚಿಸುವ ಸಂಖ್ಯೆಯನ್ನು ಬರೆಯಿರಿ.

☐ ಮತ್ತು 57.

2) ಮಣಿಗಳನ್ನು ಎಣಿಸಿ ಸಂಖ್ಯೆ ಮತ್ತು ಸಂಖ್ಯಾ ಹೆಸರನ್ನು ಬರೆಯಿರಿ.



☐ _____

3) ವಿಸ್ತರಿಸಿ ಬರೆಯಿರಿ.

287 _____

4) ಸಂಖ್ಯಾ ರಟ್ಟುಗಳು ತೋರಿಸುವ ಮೂರು ಅಂಕಿಯ ಸಂಖ್ಯೆ.

300	40	4	☐

5) ಸಂಖ್ಯಾ ರಟ್ಟುಗಳು ತೋರಿಸುವ ಮೂರು ಅಂಕಿಯ ಸಂಖ್ಯೆ.

☐

ನಾನು ಕಲಿತದ್ದು

ನನ್ನಿಂದ,

100 ನ್ನು ರಚಿಸುವ ಸಂಖ್ಯೆಗಳನ್ನು ಬರೆಯಲು ಸಾಧ್ಯ ☐

101 ರಿಂದ 999 ರವರೆಗೆ ಸಂಖ್ಯೆಗಳನ್ನು ಓದಲು, ಬರೆಯಲು ಸಾಧ್ಯ. ☐

ಮೂರು ಅಂಕಿಯ ಸಂಖ್ಯೆಗಳಲ್ಲಿ ಸ್ಥಾನ ಬೆಲೆಗಳನ್ನು ಕಂಡುಹಿಡಿಯಲು ಸಾಧ್ಯ. ☐

ವಿಸ್ತರಿಸಿ ಬರೆಯಲು ಮತ್ತು ಸೇರಿಸಿ ಬರೆಯಲು ಸಾಧ್ಯ. ☐

4. ಯಾವುದು? ಎಲ್ಲಿ?

ಕಲಿಯೋಣ



ಪುಸ್ತಕಗಳಲ್ಲಿ ಪುಟದ ಸಂಖ್ಯೆಗಳನ್ನು ಯಾವ ರೀತಿ ಸೂಚಿಸಿದ್ದಾರೆ ಗೊತ್ತೇ? ಯಾವುದಾದರೂ ಒಂದು ಪುಟವನ್ನು ತೆಗೆದು ಆ ಸಂಖ್ಯೆಗೆ ಹಿಂದಿನ, ಮುಂದಿನ ಪುಟದ ಸಂಖ್ಯೆಯನ್ನು ಅನುಕ್ರಮವಾಗಿ ಹೇಳಲು ಸಾಧ್ಯವೇ.

ಮಾಡಿ ನೋಡೋಣ



ಶಿಕ್ಷಕರು ಯಾವುದಾದರೂ ಮೂರು ಅಂಕಿಯ ಸಂಖ್ಯೆಯನ್ನು ಹೇಳಿದಾಗ, ಒಬ್ಬ ವಿದ್ಯಾರ್ಥಿಯು ಆ ಸಂಖ್ಯೆಯ ಮುಂದಿನ ಸಂಖ್ಯೆಗಳನ್ನು ಮತ್ತೊಂದು ವಿದ್ಯಾರ್ಥಿಯು ಆ ಸಂಖ್ಯೆಯ ಹಿಂದಿನ ಸಂಖ್ಯೆಗಳನ್ನು ಹೇಳುವಂತೆ ಹೇಳಿರಿ.

ಅಭ್ಯಾಸ ಮಾಡೋಣ

ಮುಂದಿನ ಸಂಖ್ಯೆಗಳನ್ನು ಬರೆಯಿರಿ.



ಅಭ್ಯಾಸ ಮಾಡೋಣ

ಹಿಂದಿನ ಸಂಖ್ಯೆಗಳನ್ನು ಬರೆಯಿರಿ.



ಕೊಟ್ಟಿರುವ ಸಂಖ್ಯೆಗಳಿಗೆ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಗಳನ್ನು ಬರೆಯಿರಿ.



ಅನ್ವೇಷಿಸಿ ತಿಳಿಯೋಣ

395ರ ಮುಂದಿನ ಸಂಖ್ಯೆಗಳನ್ನು ಬರೆಯಿರಿ.

801ರ ಸಂಖ್ಯೆಗಳ ಹಿಂದಿನ ಸಂಖ್ಯೆಗಳನ್ನು ಬರೆಯಿರಿ.

ಕಲಿಯೋಣ

ಒಂದು ಶಾಲಾ ವಸತಿ ನಿಲಯದಲ್ಲಿರುವ ಕೊಠಡಿಗಳಿಗೆ ಸಂಖ್ಯೆಗಳನ್ನು ನೀಡುವ ಕೆಲಸವು ನಡೆದುಕೊಂಡಿದೆ. ಅಲ್ಲಿ ಕೆಲವು ಕೊಠಡಿಗಳಿಗೆ ಮಾತ್ರ ಸಂಖ್ಯೆಗಳನ್ನು ನೀಡಲಾಗಿಲ್ಲ, ಬಿಟ್ಟಿರುವ ಆ ಕೊಠಡಿ ಸಂಖ್ಯೆಗಳ ಸಂಖ್ಯೆಗಳನ್ನು ನಿಮ್ಮಿಂದ ಕಂಡು ಹಿಡಿಯಲು ಸಾಧ್ಯವೇ?

ಮಾಡಿ ನೋಡೋಣ



ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ. ನೆಲದ ಮೇಲೆ ಕೆಲವು ಮೂರು ಅಂಕಿಯ ಸಂಖ್ಯಾರಟ್ಟುಗಳನ್ನು ಬರೆದು ಅವುಗಳಲ್ಲಿ ಕೆಲವು ಸಂಖ್ಯೆಗಳನ್ನ ಮರೆಮಾಡಿ. ಮರೆಮಾಡದ ಸಂಖ್ಯೆಗಳನ್ನು ನೋಡಿ ಅದರ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಗುರುತಿಸುವಂತೆ ಪ್ರೋತ್ಸಾಹಿಸಬೇಕು.

ಅಭ್ಯಾಸ ಮಾಡೋಣ

ಮುಂದಿನ ಸಂಖ್ಯೆಗಳನ್ನು ಮತ್ತು ಹಿಂದಿನ ಸಂಖ್ಯೆಗಳನ್ನು ಬರೆಯಿರಿ.

← 230 →	← 318 →	← 521 →
← 499 →	← 700 →	← 665 →
← 300 →	← 579 →	← 811 →
← 709 →	← 810 →	← 998 →

ಅಭ್ಯಾಸ ಮಾಡೋಣ

ಮಧ್ಯದ ಸಂಖ್ಯೆಗಳನ್ನು ಬರೆಯೋಣ.

199 ← ☐ → 201	301 ← ☐ → 303	443 ← ☐ → 445
698 ← ☐ → 700	511 ← ☐ → 513	896 ← ☐ → 898
750 ← ☐ → 752	800 ← ☐ → 802	990 ← ☐ → 992

ಅನ್ವೇಷಿಸಿ ತಿಳಿಯೋಣ

ಗೆರೆ ಎಳೆದ ಸ್ಥಳಗಳನ್ನು ಭರ್ತಿ ಮಾಡಿ.

ಸಾರ ತನ್ನ ಪಠ್ಯಪುಸ್ತಕದ ಪುಟಗಳನ್ನು ಜೋಡಿಸುತ್ತಿದ್ದಳು. ಅವಳಿಗೆ ಪುಟಗಳನ್ನು ಜೋಡಿಸಲು ಸಹಾಯ ಮಾಡಿರಿ.

i) ಮುಂದಿನ ಪುಟದ ಸಂಖ್ಯೆಯನ್ನು ಬರೆಯಿರಿ.



ii) ಹಿಂದಿನ ಪುಟದ ಸಂಖ್ಯೆಯನ್ನು ಬರೆಯಿರಿ.



iii) 238 ಕ್ಕೂ 241 ನಡುವೆ ಇರುವ ಪುಟಗಳು _____ಮತ್ತು _____.

iv) 240 ಕ್ಕೂ 243 ಕ್ಕೂ ನಡುವಿನ ಪುಟಗಳು _____ಮತ್ತು_____.

v) 281 ಕ್ಕೂ ಮುಂದಿನ ಎರಡು ಪುಟಗಳು _____ ಮತ್ತು _____.

vi) 288 ಕ್ಕೂ ಮುಂದಿನ ಎರಡು ಪುಟಗಳು _____ ಮತ್ತು _____.

vii) 295 ಕ್ಕೂ 305 ಕ್ಕೂ ನಡುವಿನ ಪುಟಗಳು,

_____, _____, _____, _____, _____, _____, _____, _____ಮತ್ತು _____.

ಮಾಡಿ ನೋಡೋಣ

ಕಪ್ಪು ಹಲಗೆಯಲ್ಲಿ ಯಾವುದಾದರೂ ಒಂದು ಮೂರು ಅಂಕಿಯ ಸಂಖ್ಯೆಯನ್ನು ಬರೆಯುವುದು ಮಕ್ಕಳು ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಸಂಖ್ಯೆಗಳನ್ನು ಕಂಡುಹಿಡಿದು ಅನುಕ್ರಮವಾಗಿ ಬರೆಯಲು ಪ್ರೋತ್ಸಾಹ ನೀಡುವುದು.

ಅಭ್ಯಾಸ ಮಾಡೋಣ

ಎರಡು ಎರಡರಂತೆ ಮುಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

100 102 104 ☐ ☐ ☐ ☐ ☐ ☐

ಮೂರು ಮೂರರಂತೆ ಮುಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

306 309 312 ☐ ☐ ☐ ☐ ☐ ☐

ನಾಲ್ಕು ನಾಲ್ಕರಂತೆ ಮುಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

210 214 218 ☐ ☐ ☐ ☐ ☐ ☐

ಮುಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

ಐದು ಐದರಂತೆ



ಹತ್ತು ಹತ್ತರಂತೆ



ಅಭ್ಯಾಸ ಮಾಡೋಣ

ಎರಡು ಎರಡರಂತೆ ಹಿಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

ಮೂರು ಮೂರರಂತೆ ಹಿಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

ಹಿಂದಿನ ಸಂಖ್ಯೆಗಳನ್ನು ಎಣಿಸಿ ಬರೆಯಿರಿ.

ಐದು ಐದರಂತೆ



ಹತ್ತು ಹತ್ತರಂತೆ



ಅನ್ವೇಷಿಸಿ ತಿಳಿಯೋಣ

ನಾವಿಬ್ಬರೂ ಹತ್ತು ಹತ್ತರಂತೆ ಐದು ಸಾರಿ ಜಿಗಿದರೆ ಎಲ್ಲಿ ಸೇರುತ್ತೇವೆ?



ಸಂಖ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಸರಿಯಾದ ಗುಂಪಿಗೆ (✓) ಹಾಕಿರಿ.

☐ ನಾಲ್ಕು ನಾಲ್ಕರಂತೆ ಹೆಚ್ಚಾಗುವುದು.

☐ ನಾಲ್ಕು ನಾಲ್ಕರಂತೆ ಕಡಿಮೆಯಾಗುವುದು.

500 ರಿಂದ ಮುಂದುವರೆಸಿ 50 ಐವತ್ತರಾಗಿ ಮುಂದಿನ ಆರು ಸಂಖ್ಯೆಗಳನ್ನು ಬರೆಯಿರಿ.

ಮಾಡಿ ನೋಡೋಣ

ಇಬ್ಬರು ಮಕ್ಕಳಿಗೂ ಒಂದೊಂದು ಪುಸ್ತಕವನ್ನು ಕೊಡುವುದು ಒಬ್ಬೊಬ್ಬರು ಯಾವುದಾದರೂ ಒಂದು ಪುಟವನ್ನು ತೆರೆಯುವಂತೆ ಹೇಳುವುದು ಆ ಪುಸ್ತಕದ ಎಡ ಭಾಗದ ಪುಟದಲ್ಲಿರುವ ಸಂಖ್ಯೆಯನ್ನು ಗಮನಿಸಿ ಅವುಗಳಲ್ಲಿ ದೊಡ್ಡ ಸಂಖ್ಯೆ ಯಾವುದು ಚಿಕ್ಕ ಸಂಖ್ಯೆ ಯಾವುದು ಎನ್ನುವುದನ್ನು ಕಂಡುಹಿಡಿಯುವಂತೆ ಹೇಳುವುದು

ಕಲಿಯೋಣ

ನಿತ್ಯ ಮತ್ತು ಪ್ರವೀಣ ಪ್ರತಿದಿನ ಎಳ್ಳು ಉಂಡೆಗಳನ್ನು ತಿನ್ನುವರು ಒಂದು ದಿನ ಯಾರ ಹತ್ತಿರ ಅಧಿಕವಾದ ಎಳ್ಳು ಉಂಡೆಗಳು ಇವೆ ಎಂಬುದನ್ನು ಕಂಡುಹಿಡಿಯಲು ಯೋಚಿಸಿದರು...

216 ಮತ್ತು 214

ನಿನಗಿಂತ ನನ್ನ ಹತ್ತಿರ ಅಧಿಕವಾದ ಎಳ್ಳು ಉಂಡೆಗಳು ಇವೆ.



ಹೇಗೆ ಕಂಡುಹಿಡಿದೆ?



ಮೊದಲು ನೂರು ಸಂಖ್ಯೆಯ ಎಳ್ಳು ಉಂಡೆಗಳಿರುವ ಡಬ್ಬಿಯನ್ನು ನೋಡು.



ನಮ್ಮಿಬ್ಬರ ಹತ್ತಿರ ಎರಡು ಡಬ್ಬಿಗಳು ಇವೆ.



ಸರಿ, ಮುಂದುವರೆದು 10 ಉಂಡೆಗಳು ಇರುವ ಡಬ್ಬಿಯನ್ನು ನೋಡು.



ನಮ್ಮ ಒಬ್ಬೊಬ್ಬರ ಹತ್ತಿರ ಒಂದು ಡಬ್ಬಿ ಇದೆ.



ಸರಿ ಈಗ ಬಿಡಿಯಾಗಿರುವ ಎಳ್ಳು ಉಂಡೆಗಳನ್ನು ನೋಡು.



ನಿನ್ನ ಹತ್ತಿರ 6 ಉಂಡೆಗಳು, ನನ್ನ ಹತ್ತಿರ 4 ಎಳ್ಳು ಉಂಡೆಗಳು ಇವೆ. ನಿನ್ನ ಹತ್ತಿರವೇ ಅಧಿಕವಾದ ಎಳ್ಳು ಉಂಡೆಗಳು ಇವೆ ನೋಡು.

ಸಂಖ್ಯೆಗಳನ್ನು ಹೋಲಿಸುವಾಗ ಮೊದಲು ನೂರುಗಳನ್ನು ಹೋಲಿಸಿ ನಂತರ ನೂರುಗಳು ಸಮವಾಗಿದ್ದರೆ ಹತ್ತುಗಳನ್ನು ಹೋಲಿಸಿ ಗಳು ಸಮವಾಗಿದ್ದರೆ ಬಿಡುಗಳನ್ನು ಹೋಲಿಸಿ ಹೇಳಬೇಕು.



ಆದ್ದರಿಂದ 214ಕ್ಕಿಂತ 216 ದೊಡ್ಡದು

ಅಭ್ಯಾಸ ಮಾಡೋಣ

ದೊಡ್ಡ ಸಂಖ್ಯೆಗೆ ಬಣ್ಣ ಹಚ್ಚಿರಿ.



ಚಿಕ್ಕ ಸಂಖ್ಯೆಗೆ ವೃತ್ತ ಹಾಕಿರಿ.



ಸಂಖ್ಯೆಗಳನ್ನು ಹೋಲಿಸಿ ದೊಡ್ಡ ಸಂಖ್ಯೆಯನ್ನು ಬರೆಯಿರಿ.



ಸಂಶೋಧಿಸಿ ತಿಳಿಯೋಣ

ಸರಿಯಾದ ಉತ್ತರಕ್ಕೆ ಬಣ್ಣ ಹಚ್ಚಿರಿ.

109 ಕ್ಕಿಂತ ದೊಡ್ಡ ಸಂಖ್ಯೆ	102	110	100
238 ಕ್ಕಿಂತ ಚಿಕ್ಕ ಸಂಖ್ಯೆ	300	247	237
581 ಕ್ಕಿಂತ ಚಿಕ್ಕ ಸಂಖ್ಯೆ	581	518	600
870 ಕ್ಕಿಂತ ದೊಡ್ಡ ಸಂಖ್ಯೆ	871	817	869
942 ಕ್ಕಿಂತ ಚಿಕ್ಕ ಸಂಖ್ಯೆ	999	986	924

ಸರಿಯಾದ ಉತ್ತರಕ್ಕೆ ವೃತ್ತ ಹಾಕಿರಿ.

(i) ನಾನು 690 ಕ್ಕಿಂತ ದೊಡ್ಡವನು; 770 ಕ್ಕಿಂತ ಚಿಕ್ಕವನು. ನಾನು ಯಾರು?

865 755 678

(ii) ನಾನು 150 ಕ್ಕಿಂತ ದೊಡ್ಡವನು; 375 ಕ್ಕಿಂತ ಚಿಕ್ಕವನು. ನಾನು ಯಾರು?

346 130 427

(iii) ನಾನು 790 ಕ್ಕಿಂತ ಚಿಕ್ಕವನು; 770 ಕ್ಕಿಂತ ದೊಡ್ಡವನು. ನಾನು ಯಾರು?

777 717 707

(iv) ನಾನು 265 ಕ್ಕಿಂತ ಚಿಕ್ಕವನು; 192 ಕ್ಕಿಂತ ದೊಡ್ಡವನು. ನಾನು ಯಾರು?

148 283 229

(v) ನಾನು 476ಕ್ಕಿಂತ ದೊಡ್ಡವನು; 575 ಕ್ಕಿಂತ ಚಿಕ್ಕವನು. ನಾನು ಯಾರು?

474 574 600

ಕಲಿಕಾ ಪಯಣ

1. ಕೊಟ್ಟಿರುವ ಸಂಖ್ಯೆಗೆ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಿರಿ.

				899					

2. ಕೊಟ್ಟಿರುವ ಸಂಖ್ಯೆಗೆ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಿರಿ.

	← 500 →	

3. ನಾಲ್ಕು ನಾಲ್ಕರಂತೆ ಎಣಿಸಿ ಮುಂದಿನ ಸಂಖ್ಯೆಗಳನ್ನು ಬರೆಯಿರಿ.

400	404								

4. ಚಿಕ್ಕ ಸಂಖ್ಯೆಗೆ ವೃತ್ತ ಹಾಕಿರಿ.

75	100

5. ನಾನು 675 ಕ್ಕಿಂತ ದೊಡ್ಡವನು; 775 ಕ್ಕಿಂತ ಚಿಕ್ಕವನು. ನಾನು ಯಾರು ಎಂದು ಕಂಡುಹಿಡಿದು ವೃತ್ತ ಹಾಕಿರಿ.

609 709 809

ನಾನು ಕಲಿತದ್ದು

ನನ್ನಿಂದ,

ಮೂರು ಅಂಕಿಯ ಸಂಖ್ಯೆಗಳ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಲು ಸಾಧ್ಯ. ☐

ಮೂರು ಅಂಕಿಯ ಸಂಖ್ಯೆಗಳಲ್ಲಿ ಹಿಂದಿನ ಸಂಖ್ಯೆಗಳನ್ನು ಮತ್ತು ಮುಂದಿನ ಸಂಖ್ಯೆಯನ್ನು ಬರೆಯಲು ಸಾಧ್ಯ. ☐

ಮೂರು ಅಂಕಿ ಸಂಖ್ಯೆಗಳ ಗುಂಪನ್ನು ಸೂಕ್ಷ್ಮವಾಗಿ ಗಮನಿಸಿ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಲು ಸಾಧ್ಯ. ☐

ಎರಡು ಸಂಖ್ಯೆಗಳನ್ನು ಹೋಲಿಸುವಾಗ ದೊಡ್ಡ ಸಂಖ್ಯೆ ಚಿಕ್ಕ ಸಂಖ್ಯೆಯನ್ನು ಕಂಡುಹಿಡಿಯಲು ಸಾಧ್ಯ. ☐

ನಾನೇ ಮಾಡುವೆನು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. (i) ಕೊಟ್ಟಿರುವ ಆಕೃತಿಯಲ್ಲಿ ಅಂಚುಗಳನ್ನು ಎಣಿಸಿ ಬರೆಯಿರಿ.

ಅಂಚುಗಳ ಸಂಖ್ಯೆ _____.

(ii) ಕೊಟ್ಟಿರುವ ಆಕೃತಿಯಲ್ಲಿ ಶೃಂಗಗಳನ್ನು ಎಣಿಸಿ ಬರೆಯಿರಿ.

ಶೃಂಗಗಳ ಸಂಖ್ಯೆ _____.

2. (i) ಮಣಿಗಳನ್ನು ಎಣಿಸಿ ಬರೆಯಿರಿ.



(ii) 789–ರಲ್ಲಿ _____ ನೂರುಗಳು, _____ ಹತ್ತುಗಳು, _____ ಒಂದುಗಳು ಇವೆ.

3. (i) ವಿಸ್ತರಿಸಿ ಬರೆಯಿರಿ.

894 = _____

(ii) ಗೆರೆ ಹಾಕಿದ ಸಂಖ್ಯೆಯ ಸ್ಥಾನ ಬೆಲೆಯನ್ನು ಬರೆಯಿರಿ.

9<u>5</u>6 _____

4. (i) ಕೆಳಗೆ ಕೊಟ್ಟಿರುವ ಸಂಖ್ಯೆಯ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಿರಿ.

				950					

(ii) ಕೆಳಗೆ ಕೊಟ್ಟಿರುವ ಸಂಖ್ಯೆಯ ಹಿಂದಿನ ಸಂಖ್ಯೆ ಮತ್ತು ಮುಂದಿನ ಸಂಖ್ಯೆಯನ್ನು ಬರೆಯಿರಿ.

	500	

5. (i) ದೊಡ್ಡ ಸಂಖ್ಯೆಗೆ ವೃತ್ತ ಹಾಕಿರಿ, ಚಿಕ್ಕ ಸಂಖ್ಯೆಗೆ ಗೆರೆ ಹಾಕಿರಿ.

969 963

(ii) 740 ಕ್ಕಿಂತ ದೊಡ್ಡದು ಹಾಗೂ 795 ಕ್ಕಿಂತ ಚಿಕ್ಕ ಸಂಖ್ಯೆಗೆ ವೃತ್ತ ಹಾಕಿರಿ.

799 789 739

ನಾನೇ ಹೇಳುವೆನು

6. ಸಂಖ್ಯೆಗಳನ್ನು ಓದಿ ತೋರಿಸಿ.

324 567 291 460 525 909 800 199 758 617

7. ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ ನೂರುಗಳು, ಹತ್ತುಗಳು ಮತ್ತು ಒಂದುಗಳನ್ನು ಹೇಳಿ, ಅದಕ್ಕೆ ತಕ್ಕ ಹಾಗೆ ಮಣಿಗಳಲ್ಲಿ ತೋರಿಸಿ.

495 726 349 981 278

ಕಾರ್ಯ ಯೋಜನೆ

8. ಜೇಡಿ ಮಣ್ಣನ್ನು ಬಳಸಿಕೊಂಡು ಆಕೃತಿಗಳನ್ನು ರಚನೆ ಮಾಡಿ ತರಗತಿಯಲ್ಲಿ ಪ್ರದರ್ಶಿಸಿ, ಅವುಗಳ ಹೆಸರುಗಳನ್ನು ಲಕ್ಷಣಗಳನ್ನು ಹೇಳಿ.



9. ಯಾವುದಾದರೂ ಒಂದು ಮೂರು ಅಂಕೆಯ ಸಂಖ್ಯೆಯನ್ನು ಬರೆದು ಖಾಲಿ ಜಾಗವನ್ನು ಭರ್ತಿ ಮಾಡಿ.

ಸಂಖ್ಯೆಯನ್ನು ಬರೆಯಿರಿ

ಸಂಖ್ಯೆ _____

ಅದರ ಸಂಖ್ಯಾ ಹೆಸರು _____

ಮುಂದೆ ಮತ್ತು ಹಿಂದೆ

ಮುಂದೆ ಬರುವ ಸಂಖ್ಯೆ	ಹಿಂದೆ ಬರುವ ಸಂಖ್ಯೆ

ಹತ್ತು ಹತ್ತರಂತೆ ಎಣಿಸಿ ಬರೆಯಿರಿ

☐, ☐, ☐, ☐, ☐

ವಿಸ್ತರಣಾ ರೂಪದಲ್ಲಿ ಬರೆಯಿರಿ

ನೂರುಗಳು ಹತ್ತುಗಳು ಒಂದುಗಳು

☐ + ☐ + ☐

ಘಟಕ
2

5. ನನ್ನ ಆಸೆಗಳು

ಕಲಿಯೋಣ

ತರುಣ್ ಮತ್ತು ಪ್ರವೀಣ್ ಶಾಲೆಗೆ ಬರುವ ದಾರಿಯಲ್ಲಿ ತಾವು ನೋಡಿದ ವಾಹನಗಳ ಸಂಖ್ಯೆಗಳನ್ನು ಕೆಳಕಂಡಂತೆ ಪಟ್ಟಿ ಮಾಡಿದರು. ಇವರಿಬ್ಬರೂ ಮಾಡಿದ ಪಟ್ಟಿಯಲ್ಲಿ ವಾಹನಗಳ ಸಂಖ್ಯೆಯನ್ನು ವೇಗವಾಗಿ ಹೇಳಬಹುದು. ಏಕೆ?

ತರುಣ್	ವಾಹನ	ನೇರ ಗೆರೆಗಳು
		𝍸 𝍸 𝍸 𝍸
		𝍸 𝍸 𝍸

ಪ್ರವೀಣ್	ವಾಹನ	ನೇರ ಗೆರೆಗಳು
		𝍸 𝍸 𝍸 𝍸
		𝍸 𝍸 𝍸

ನೇರ ಗೆರೆಗಳನ್ನು ಪರಿಚಯಿಸುವುದು ಅವುಗಳನ್ನು ಎಣಿಸಿ ಸರಿಯಾದ ಎಣಿಕೆಯನ್ನು ಬರೆಯಲು ಪ್ರೇರೇಪಿಸುವುದು.

ಅಭ್ಯಾಸ ಮಾಡೋಣ

ನೇರ ಗೆರೆಗಳ ಸೂಚಿಸುವ ಸಂಖ್ಯೆಗಳನ್ನು ಹೊಂದಿಸಿ.

𝍸 𝍸 𝍸	10
𝍸 𝍸	6
𝍸 𝍸 𝍸 𝍸	8
𝍸 𝍸	5
𝍸 𝍸 𝍸 𝍸	4
𝍸 𝍸	9

ಅಭ್ಯಾಸ ಮಾಡೋಣ

ಬೇಸಿಗೆ ರಜೆಯಲ್ಲಿ ಗೀತಾ ಮತ್ತು ಅವಳ ಗೆಳತಿಯರು ಓದಿದ ಕಥೆ ಪುಸ್ತಕಗಳ ಎಣಿಕೆಯನ್ನು ನೇರ ಗೆರೆಗಳ ಮೂಲಕ ಪಟ್ಟಿಯಲ್ಲಿ ಕೊಡಲಾಗಿದೆ ನೇರ. ಗೆರೆಗಳನ್ನು ಎಣಿಸಿ ಅವುಗಳ ಸಂಖ್ಯೆಗಳನ್ನು ಬರೆಯಿರಿ.

ಹೆಸರು	ನೇರ ಗೆರೆಗಳು	ಓದಿದ ಪುಸ್ತಕಗಳ ಸಂಖ್ಯೆ
ಗೀತಾ	𝍸 𝍸 𝍸 |	16
ರಾಜೇಶ್	𝍸 |||	
ರೀನ	𝍸 𝍸 ||||	
ಸಲೀಮಾ	𝍸 𝍸 𝍸 ||||	
ಡೇವಿಡ್	𝍸 𝍸 ||||	

ಮೇಲಿನ ಪಟ್ಟಿಯನ್ನು ಸೂಕ್ಷ್ಮ ವಾಗಿ ಗಮನಿಸಿ ಖಾಲಿಬಿಟ್ಟ ಸ್ಥಳವನ್ನು ಭರ್ತಿ ಮಾಡಿ

1. ಅತಿ ಹೆಚ್ಚು ಕಥೆ ಪುಸ್ತಕಗಳನ್ನು ಓದಿದವರು _____.

2. ಸಮವಾಗಿ ಕಥೆ ಪುಸ್ತಕಗಳನ್ನು ಓದಿದವರು _____ ಮತ್ತು _____.

3. ಅತಿ ಕಡಿಮೆ ಕಥೆ ಪುಸ್ತಕಗಳನ್ನು ಓದಿದವರು _____.

4. ಡೇವಿಡ್ ಓದಿದ ಕಥೆ ಪುಸ್ತಕಗಳ ಸಂಖ್ಯೆ ಗಳಿಗಿಂತ ರಾಜೇಶ್ ಓದಿದ ಕಥೆ ಪುಸ್ತಕಗಳ ಸಂಖ್ಯೆ _____ ಕಡಿಮೆ.

5. ರಾಜೇಶ್ ಓದಿದ ಕಥೆ ಪುಸ್ತಕಗಳ ಸಂಖ್ಯೆ ಗಳಿಗಿಂತ ಸಲೀಮಾ ಓದಿದ ಕಥೆ ಪುಸ್ತಕಗಳ ಸಂಖ್ಯೆ _____ ಅಧಿಕ.

ಅಭ್ಯಾಸ ಮಾಡೋಣ

ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಕೆಳಗಿನ ಪಟ್ಟಿಯನ್ನು ಪೂರ್ತಿ ಮಾಡಿ.

ಆಟಗಳು	ನೇರ ಗೆರೆಗಳು	ಆಟವಾಡುವವರ ಸಂಖ್ಯೆ
ಚಂಡಿನಾಟ ಆಡುವವರು		
ಮರಳಿನ ಮನೆ ಕಟ್ಟುವ ಆಟ		
ಕಣ್ಣಮುಚ್ಚಾಲೆ ಆಟ		
ಬಲೂನ್ ಆಟ		
ಚಿಪ್ಪನ್ನು ಶೇಖರಿಸುವ ಆಟ		

ಪಟ್ಟಿಯನ್ನು ಸೂಕ್ಷ್ಮ ವಾಗಿ ಗಮನಿಸಿ ಗೆರೆ ಎಳೆದ ಸ್ಥಳಗಳನ್ನು ಭರ್ತಿ ಮಾಡಿ.

1. ಬಲೂನ್ ಆಟ ಆಡುವವರಿಗಿಂತ ಚಂಡಿನಾಟ ಆಡುವವರ ಸಂಖ್ಯೆ _____ ಕಡಿಮೆ.
2. ಚಂಡಿನ ಆಟ ಆಡುವವರ ಸಂಖ್ಯೆಗಿಂತ 4 ಜನರು ಅಧಿಕವಾಗಿ ಆಡಿದ ಆಟ _____.
3. ಬಲೂನ್ ಆಟ ಆಡುವವರ ಸಂಖ್ಯೆಗಿಂತ 2 ಜನರು ಕಡಿಮೆಯಾಗಿ ಆಡುವ ಆಟ _____.
4. _____ ಆಡುವವರ ಸಂಖ್ಯೆಗಿಂತ ಕಣ್ಣಮುಚ್ಚಾಲೆ ಆಟ ಆಡುವವರ ಸಂಖ್ಯೆ _____ ಅಧಿಕ.

ನಾನು ಕಲಿತದ್ದು

ನನ್ನಿಂದ,

ಮಾಹಿತಿಯನ್ನು ಸಂಗ್ರಹಿಸಿ ನೇರ ಗೆರೆಗಳಲ್ಲಿ ದಾಖಲಿಸಲು ಸಾಧ್ಯ. ☐

ಮಾಹಿತಿಯನ್ನು ಹಂಚಿ ಅನ್ವೇಷಣೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯ. ☐

6. ಮೊತ್ತ ಎಷ್ಟು?

ಕಲಿಯೋಣ

ಒಂದು ಶಾಲೆ ತನ್ನ ಗ್ರಂಥಾಲಯಕ್ಕೆ ಕೆಲವು ಪುಸ್ತಕಗಳನ್ನು ಖರೀದಿಸಿತು. ಅರುಣ್, ರೀಟಾ, ಗಾಯತ್ರಿ, ಭಾನು, ಪೀಟರ್ ಮತ್ತು ಅಬ್ದುಲ್ಲಾ ಮುಂತಾದವರು ಅವುಗಳ ವಿಷಯದ ಪ್ರಕಾರ ಬೇರ್ಪಡಿಸಿ ಇಟ್ಟರು.



ಅಭ್ಯಾಸ ಮಾಡೋಣ

ಗಣಿತ ಒಗಟು ಪುಸ್ತಕಗಳ ಸಂಖ್ಯೆ.

ಗಣಿತ ಮೇಧಾವಿಗಳ ಪುಸ್ತಕಗಳ ಸಂಖ್ಯೆ.

ಗಣಿತಕ್ಕೆ ಸಂಬಂಧಿಸಿದ ಪುಸ್ತಕಗಳ ಒಟ್ಟು ಸಂಖ್ಯೆ.

	ಹ	ಒ
+		

ಚಿತ್ರಕಥೆ ಪುಸ್ತಕಗಳ ಸಂಖ್ಯೆ.

ನೀತಿ ಕಥೆಗಳ ಪುಸ್ತಕಗಳ ಸಂಖ್ಯೆ.

ಕಥೆ ಪುಸ್ತಕಗಳ ಒಟ್ಟು ಸಂಖ್ಯೆ.

	ಹ	ಒ
+		

ಅಭ್ಯಾಸ ಮಾಡೋಣ

ಬಾಹ್ಯಾಕಾಶ ವಿಜ್ಞಾನ ಪುಸ್ತಕಗಳ ಸಂಖ್ಯೆ.

ವಿಜ್ಞಾನ ಮೇಧಾವಿ ಪುಸ್ತಕಗಳ ಸಂಖ್ಯೆ.

ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳ ಒಟ್ಟು ಸಂಖ್ಯೆ.

	ಹ	ಒ
+		

ಕಥೆ ಪುಸ್ತಕಗಳ ಒಟ್ಟು ಸಂಖ್ಯೆ.

ಗಣಿತಕ್ಕೆ ಸಂಬಂಧಿಸಿದ ಪುಸ್ತಕಗಳ ಒಟ್ಟು ಸಂಖ್ಯೆ.

ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳ ಒಟ್ಟು ಸಂಖ್ಯೆ.

ಒಟ್ಟು ಪುಸ್ತಕಗಳ ಸಂಖ್ಯೆ.

	ನೂ	ಹ	ಒ
+			

ಕೂಡುವ ಲೆಕ್ಕಗಳು 100 ಕ್ಕಿಂತ ಅಧಿಕ ಅಥವಾ ಕಡಿಮೆ ಎಂದು ಊಹಿಸಿ ಹೊಂದಿಸಿ.



ಮಾಡಿ ನೋಡೋಣ

ಸ್ಥಾನ ಬದಲಾವಣೆ ಇಲ್ಲದೆ ಕೂಡುವುದು

ಕೊಟ್ಟಿರುವ ಎರಡು ಸಂಖ್ಯೆಗಳಿಗೆ ಮಕ್ಕಳು 100ರ ಮಣಿಕಟ್ಟುಗಳನ್ನು,100 ಮಣಿಕಟ್ಟುಗಳ ಜೊತೆ 10ರ ಮಣಿ ಸರಗಳನ್ನು 10 ಮಣಿ ಸರಗಳ ಜೊತೆ, ಬಿಡಿ ಮಣಿಗಳನ್ನು ಬಿಡಿ ಮಣಿಗಳ ಜೊತೆ ಸೇರಿಸಿ, ಒಟ್ಟು ಮಣಿಗಳ ಸಂಖ್ಯೆಗಳನ್ನು ಕಂಡುಹಿಡಿಯುವುದನ್ನು ದೃಢಪಡಿಸಿ.

ಅಭ್ಯಾಸ ಮಾಡೋಣ

ಮಣಿಗಳನ್ನು ಎಣಿಸಿ ಬರೆದು ಕೂಡಿರಿ.



ನೂ	ಹ	ಒ



ನೂ	ಹ	ಒ



ನೂ	ಹ	ಒ

ಕೂಡಿ ಬರೆಯಿರಿ.

ನೂ	ಹ	ಒ
4	2	1
+		6

ನೂ	ಹ	ಒ
2	5	3
+	2	2

ನೂ	ಹ	ಒ
3	4	4
+	3	5

ನೂ	ಹ	ಒ
6	3	6
+ 2	2	2

ನೂ	ಹ	ಒ
6	7	3
+ 2	2	5

ನೂ	ಹ	ಒ
3	9	2
+ 1	0	3

ನೂ	ಹ	ಒ
6	4	3
+ 3	2	1

ನೂ	ಹ	ಒ
7	1	2
+ 1	3	7

ನೂ	ಹ	ಒ
8	2	4
+ 1	7	5

ಕಲಿಯೋಣ

ಕೂಡಿ ಬರೆಯಿರಿ. 134 + 77



134+77=211

ಸ್ಥಾನ ಬದಲಾವಣೆಯೊಂದಿಗೆ ಕೂಡುವುದು

	ನೂರುಗಳು	ಹತ್ತುಗಳು	ಒಂದುಗಳು
	1	3	4
+		7	7

ಹಂತ–1 ಒಂದುಗಳನ್ನು ಕೂಡಿರಿ
4 ಒಂದುಗಳು + 7 ಒಂದುಗಳು = 11 ಒಂದುಗಳು.

	ನೂರುಗಳು	ಹತ್ತುಗಳು	ಒಂದುಗಳು
		1	
	1	3	4
+		7	7
			1

ಹಂತ–2 11 ಒಂದುಗಳನ್ನು ಸ್ಥಾನಬದಲಾವಣೆ ಮಾಡಿ.
11 ಒಂದುಗಳು = 1 ಹತ್ತು + 1 ಒಂದು

	ನೂರುಗಳು	ಹತ್ತುಗಳು	ಒಂದುಗಳು
		1	
	1	3	4
+		7	7
			1

ಹಂತ–3 ಹತ್ತುಗಳನ್ನು ಕೂಡಿರಿ.
3 ಹತ್ತುಗಳು + 7 ಹತ್ತುಗಳು + 1 ಹತ್ತು = 11 ಹತ್ತುಗಳು.

	ನೂರುಗಳು	ಹತ್ತುಗಳು	ಒಂದುಗಳು
	1	1	
	1	3	4
+		7	7
		1	1

ಹಂತ–4 11 ಹತ್ತುಗಳನ್ನು ಸ್ಥಾನಬದಲಾವಣೆ ಮಾಡಿ.
11 ಹತ್ತುಗಳು = 1 ನೂರು + 1 ಹತ್ತು.

	ನೂರುಗಳು	ಹತ್ತುಗಳು	ಒಂದುಗಳು
	1	1	
	1	3	4
+		7	7
	2	1	1

ಹಂತ–5 ನೂರುಗಳನ್ನು ಕೂಡಿರಿ.
1 ನೂರು + 1 ನೂರು = 2 ನೂರುಗಳು.

ಅಭ್ಯಾಸ ಮಾಡೋಣ

ಮಣಿಗಳನ್ನು ಉಪಯೋಗಿಸಿ ಕೂಡಿಸಿ ಉತ್ತರ ಬರೆಯಿರಿ.

	ನೂ	ಹ	ಒ
	1	6	5
+			8

	ನೂ	ಹ	ಒ
	2	3	4
+		8	6

	ನೂ	ಹ	ಒ
	4	7	8
+	3	6	7

	ನೂ	ಹ	ಒ
	5	8	2
+	3	6	9

	ನೂ	ಹ	ಒ
	3	2	6
+	1	7	8

	ನೂ	ಹ	ಒ
	4	3	9
+	2	6	5

	ನೂ	ಹ	ಒ
	5	1	7
+	2	9	9

	ನೂ	ಹ	ಒ
	5	3	4
+	3	7	6

ನೂರು ಮಣಿ ಕಟ್ಟುಗಳನ್ನು ನೂರು ಮಣಿಗಳ ಜೊತೆ, 10 ಮಣಿಸರಗಳನ್ನು 10 ಮಣಿ ಸರಗಳ ಜೊತೆ, ಬಿಡಿಮಣಿ ಬಿಡಿ ಮಣಿಗಳ ಜೊತೆ ಖಚಿತಪಡಿಸಿಕೊಳ್ಳಿ ನಂತರ ಬಿಡಿಮಣಿಗಳು ಮಣಿಸರಗಳು ಎಣಿಸಿ ಬೇಕಾದಂತೆ ಸ್ಥಾನ ಬದಲಾವಣೆ ಮಾಡಿ ಒಟ್ಟು ಮಣಿಗಳನ್ನು ಕಂಡುಹಿಡಿಯಲು ಮಾರ್ಗದರ್ಶನ ಮಾಡುವುದು.

ಅಭ್ಯಾಸ ಮಾಡೋಣ

ಒಟ್ಟು ಹಣವನ್ನು ಕಂಡುಹಿಡಿಯೋಣ.

ನೀವು ಉಳಿತಾಯ ಮಾಡಿದ ಹಣ	ನಿಮ್ಮ ಗೆಳೆಯ ಉಳಿತಾಯ ಮಾಡಿದ ಹಣ	ಇಬ್ಬರೂ ಉಳಿತಾಯ ಮಾಡಿದ ಒಟ್ಟು ಹಣ
		+ ನೂ ಹ ಒ
		+ ನೂ ಹ ಒ

ಅಭ್ಯಾಸ ಮಾಡೋಣ

ಒಟ್ಟು ಹಣವನ್ನು ಕಂಡುಹಿಡಿಯೋಣ.

ನೀವು ಉಳಿತಾಯ ಮಾಡಿದ ಹಣ	ನಿಮ್ಮ ಗೆಳೆಯ ಉಳಿತಾಯ ಮಾಡಿದ ಹಣ	ಇಬ್ಬರೂ ಉಳಿತಾಯ ಮಾಡಿದ ಒಟ್ಟು ಹಣ
		ನೂ ಹ ಒ +
		ನೂ ಹ ಒ +

ಅಭ್ಯಾಸ ಮಾಡೋಣ

ಕೂಡಿಸಿ ಬರೆಯಿರಿ.

ನೂ	ಹ	ಒ
	1	
1	4	8
+		7
1	5	5

ನೂ	ಹ	ಒ
2	3	4
+		9

ನೂ	ಹ	ಒ
		5
+	4	2

ನೂ	ಹ	ಒ
		9
+	3	7

ನೂ	ಹ	ಒ
5	4	7
+	8	4

ನೂ	ಹ	ಒ
6	7	6
+	5	8

ನೂ	ಹ	ಒ
	5	8
+	8	9

ನೂ	ಹ	ಒ
	7	9
+	7	5

ಅಭ್ಯಾಸ ಮಾಡೋಣ

ಕೂಡಿಸಿ ಉತ್ತರ ಬರೆಯಿರಿ.

	ನೂ	ಹ	ಒ
	1	1	
	6	9	5
+	2	7	5
	9	7	0

	ನೂ	ಹ	ಒ
	7	1	7
+	2	2	8

	ನೂ	ಹ	ಒ
	7	4	6
+	2	2	9

	ನೂ	ಹ	ಒ
	5	8	5
+	3	4	6

	ನೂ	ಹ	ಒ
	6	5	8
+	3	2	9

	ನೂ	ಹ	ಒ
	8	7	9
+	1	1	9

	ನೂ	ಹ	ಒ
	3	2	7
+	2	8	4

	ನೂ	ಹ	ಒ
	4	3	2
+	3	7	8

	ನೂ	ಹ	ಒ
	6	1	8
+	2	9	2

ಕೂಡಿಸಿ ತಪ್ಪಾಗಿರುವುದನ್ನು ಕಂಡುಹಿಡಿದು ಅದನ್ನು ಸರಿಪಡಿಸಿ ಬರೆಯಿರಿ.

	3	2	6
+	5	4	7
	8	6	1	3

	ನೂ	ಹ	ಒ
	3	2	6
+	5	4	7

	3	4	7
+	4	2	5
	7	6	2

	ನೂ	ಹ	ಒ
	3	4	7
+	4	2	5

	3	5	9
+	4	4	7
	7	5	1

	ನೂ	ಹ	ಒ
	3	5	9
+	4	4	7

	2	2	3
+		8	5
	2	10	8

	ನೂ	ಹ	ಒ
	2	2	3
+		8	5

ಅಭ್ಯಾಸ ಮಾಡೋಣ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಒಂದು ಹಣ್ಣಿನ ಅಂಗಡಿಯಲ್ಲಿ 125 144 ಇರುವುದು ಎಂದರೆ ಆ ಅಂಗಡಿಯಲ್ಲಿ ಇರುವ ಒಟ್ಟು ಹಣ್ಣುಗಳು ಎಷ್ಟು?

	ನೂ	ಹ	ಒ
+			

2. ನವೀನ್ ಉಳಿತಾಯ ಮಾಡಿದ ₹438. ಗಾಯಿತ್ರಿ ಉಳಿತಾಯ ಮಾಡಿದ ₹467. ಇಬ್ಬರೂ ಸೇರಿ ಉಳಿತಾಯ ಮಾಡಿದ ಒಟ್ಟು ಹಣವೆಷ್ಟು?

	ನೂ	ಹ	ಒ
+			

3. ಅನು 326 ಬಿಡಿಸಿದಳು. ಭಾನು 319 ಬಿಡಿಸಿದಳು. ಇಬ್ಬರು ಸೇರಿ ಬಿಡಿಸಿದ ಒಟ್ಟು ಹೂವುಗಳು ಎಷ್ಟು?

	ನೂ	ಹ	ಒ
+			

4. ಒಂದು ಅಂಗಡಿಯಲ್ಲಿ 524 ಮೂಟೆಗಳು ಇದ್ದವು, ಅವುಗಳ ಜೊತೆ 276 ಮೂಟೆಗಳನ್ನು ಇರಿಸಲಾಯಿತು. ಹಾಗಾದರೆ, ಆ ಅಂಗಡಿಯಲ್ಲಿರುವ ಒಟ್ಟು ಅಕ್ಕಿ ಮೂಟೆಗಳು ಎಷ್ಟು?

	ನೂ	ಹ	ಒ
+			

ಕಲಿಕಾ ಪಯಣ

1. ಮೊತ್ತವನ್ನು ಊಹಿಸಿ ಸರಿಯಾಗಿದ್ದರೆ (✓) ಹಾಕಿರಿ.

65+45

☐ 100 ಕ್ಕಿಂತ ಕಡಿಮೆ

☐ 100 ಕ್ಕಿಂತ ಅಧಿಕ

2. ಮಣಿಗಳನ್ನು ಎಣಿಸಿ ಬರೆದು ಕೂಡಿಸಿ ನೋಡಿ.



	ನೂ	ಹ	ಒ
+			

3. ಕೂಡಿ ಉತ್ತರ ಬರೆಯಿರಿ.

	ನೂ	ಹ	ಒ
	5	2	9
+	2	9	8

4. ಸಂಖ್ಯೆಗಳನ್ನು ಆರಿಸಿ ಬರೆದು ಕೂಡಿರಿ.

497 + 385

	ನೂ	ಹ	ಒ
+			

5. ಕಮಲ ಉಳಿತಾಯ ಮಾಡಿದ ಹಣ ₹536. ವಿಮಲ ಉಳಿತಾಯ ಮಾಡಿದ ಹಣ ₹379. ಇಬ್ಬರು ಸೇರಿ ಉಳಿತಾಯ ಮಾಡಿದ ಒಟ್ಟು ಹಣವೆಷ್ಟು?

		ನೂ	ಹ	ಒ
ಕಮಲ ಉಳಿತಾಯ ಮಾಡಿದ ಹಣ				
ವಿಮಲ ಉಳಿತಾಯ ಮಾಡಿದ ಹಣ	+			
ಇಬ್ಬರು ಸೇರಿ ಉಳಿತಾಯ ಮಾಡಿದ ಒಟ್ಟು ಹಣ				

ನಾನು ಕಲಿತದ್ದು

ನನ್ನಿಂದ,

ಮೂರು ಅಂಕಿಯ ಸಂಖ್ಯೆಗಳನ್ನು ಕೂಡುವಾಗ ಸ್ಥಾನಬದಲಾವಣೆ ಇಲ್ಲದೆ ಕೂಡಲು ಸಾಧ್ಯ ☐

ಮೂರು ಅಂಕಿಯ ಸಂಖ್ಯೆಗಳನ್ನು ಕೂಡುವಾಗ ಸ್ಥಾನಬದಲಾವಣೆಯೊಂದಿಗೆ ಕೂಡಲು ಸಾಧ್ಯ. ☐

ಕೂಡುವುದಕ್ಕೆ ಸಂಬಂಧಿಸಿದಂತೆ ಕಥೆ ಲೆಕ್ಕಗಳಿಗೆ ಉತ್ತರ ಕಂಡುಹಿಡಿಯಲು ಸಾಧ್ಯ. ☐

7. ಸರಿಯಾದ ಉದ್ದ...

ಕಲಿಯೋಣ

ಉತ್ಸವ ಸಭಾಂಗಣವನ್ನು ಅಲಂಕರಿಸಲು ಎರಡು ಅಂಗಡಿಗಳಿಂದ ಐದು ಘನ ಅಡಿ ಉದ್ದದ ಹೂಮಾಲೆಗಳನ್ನು ತರಲಾಯಿತು. ಅಲಂಕಾರಗಳು ಮುಗಿದಾಗ, ಅವು ವಿಭಿನ್ನ ಉದ್ದಗಳಲ್ಲಿದ್ದವು. ಏಕೆ ಎಂದು ನೀವು ವಿವರಿಸಬಹುದೇ?



ಮಾಡಿ ನೋಡೋಣ

ಒಂದು ವಸ್ತುವಿನ ಉದ್ದವನ್ನು ಅಳೆಯಲು ಮೊಳ, ಪಾದದ ಅಳತೆ, ಗೇಣು ಮತ್ತು ಗಜಗಳಂತಹ ನಿಖರವಲ್ಲದ ಅಳತೆಗಳನ್ನು ಬಳಸಿ ಅಳೆಯುವಾಗ ಅದರ ಅಳತೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆಯಾಗುತ್ತವೆ. ಎಂಬುದನ್ನು ತರಗತಿಯಲ್ಲಿರುವ ವಸ್ತುಗಳನ್ನು ಬಳಸಿ ಉದ್ದವನ್ನು ಅಳತೆ ಮಾಡಿಸಿ ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಹೇಳುವುದು.

ಅಭ್ಯಾಸ ಮಾಡೋಣ

ನಿಖರವಲ್ಲದ ಅಳತೆಗಳ ಹೆಸರುಗಳನ್ನು ಅವುಗಳನ್ನು ಬಳಸಿ ಅಳತೆ ಮಾಡುವ ವಸ್ತುಗಳ ಹೆಸರನ್ನು ಬರೆಯಿರಿ.

ಅಳತೆ				
ಅಳೆಯುವ ಸಾಧನ				
ವಸ್ತುಗಳ ಹೆಸರು				

ಅಭ್ಯಾಸ ಮಾಡೋಣ

ನಿಮ್ಮ ಗೆಳೆಯರೊಂದಿಗೆ ಸೇರಿ ಕಪ್ಪು ಹಲಗೆಯ ಉದ್ದವನ್ನು ಅಳೆಯಿರಿ.

ಕ್ರಮ ಸಂಖ್ಯೆ	ವಿದ್ಯಾರ್ಥಿಗಳ ಹೆಸರು	ಕಪ್ಪು ಹಲಗೆಯ ಉದ್ದ		
				

ಮೇಲಿನ ಪಟ್ಟಿಯನ್ನು ಸೂಕ್ಷ್ಮವಾಗಿ ಗಮನಿಸಿ ಸರಿಯಾದ ಉತ್ತರಕ್ಕೆ (✓) ಹಾಕಿರಿ.

1. ಯಾವ ಅಳತೆಯ ಸಾಧನದಿಂದ ಅಳೆದಾಗ ಒಂದೇ ರೀತಿಯಾದ ಅಳತೆಯು ಸಿಗುವುದು?

 ☐  ☐ ☐

2. ಯಾವ ಅಳತೆಯ ಸಾಧನದಿಂದ ಅಳೆದಾಗ ಒಂದೇ ರೀತಿಯಾದ ಅಳತೆಯು ಸಿಗುವುದು?

 ☐  ☐ ☐

3. ಎಲ್ಲರಿಗೂ ಒಂದೇ ರೀತಿಯಾದ ಅಳತೆ ಸಿಗಬೇಕಾದರೆ ಸರಿಯಾದ ಅಳತೆಗೋಲು ಬೇಕೇ ಬೇಡವೇ?

ಹೌದು ☐ ಇಲ್ಲ ☐

ಯಾವುದಾದರೂ ಒಂದು ನಿಖರವಲ್ಲದ ಅಳತೆಯನ್ನು (ಒಂದೇ ಅಳತೆ ಪೆನ್ಸಿಲ್ / ಒಂದೇ ಅಳತೆಯ ಕಡ್ಡಿ) ಅಳೆಯುವಾಗ ಅಳತೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗದೆ ಇರುವುದನ್ನು ಖಚಿತಪಡಿಸುವುದು.

ಕಲಿಯೋಣ

ಬಟ್ಟೆ ಅಂಗಡಿಯವರು, ದರ್ಜಿ, ಬಡಗಿ ಮುಂತಾದವರು ಉದ್ದವನ್ನು ಅಳತೆ ಮಾಡಲು ಒಂದು ಅಳತೆ ಗೋಳನ್ನು ಉಪಯೋಗಿಸುವರು, ಅದರ ಹೆಸರು ನಿಮಗೆ ಗೊತ್ತೇ?



ಒಂದು ವಸ್ತುವಿನ ಉದ್ದವನ್ನು ಅಳತೆ ಮಾಡಲು ಮೀಟರ್ ಎನ್ನುವ ಒಂದು ನಿರ್ದಿಷ್ಟ ಅಳತೆ ಸಾಧನವನ್ನು ಪ್ರಪಂಚದಾದ್ಯಂತ ಉಪಯೋಗಿಸುವರು.



ಅಳತೆ ಸಾಧನ



ಅಳತೆ ಮಾಡುವ ಸಾಧನವನ್ನು ಬಳಸಿ ಮೀಟರ್ ಎನ್ನುವ ನಿಖರ ಅಳತೆ ಸಾಧನವನ್ನು ಪರಿಚಯ ಮಾಡಿಸಿ ವಸ್ತುಗಳ ಉದ್ದವನ್ನು ಅಳೆಯುವ ಕ್ರಮವನ್ನು ತಿಳಿಸಿ ಕೊಡುವುದು.

ಅಭ್ಯಾಸ ಮಾಡೋಣ

ನಿಮ್ಮ ತರಗತಿಯಲ್ಲಿರುವ ವಸ್ತುಗಳ ಉದ್ದವನ್ನು ಅಳತೆ ಸಾಧನ ಉಪಯೋಗಿಸಿ ಅಳೆಯಿರಿ.



1. ಕಪ್ಪುಹಲಗೆ ☐ ಮೀಟರ್
2. ತರಗತಿಯ ಗೋಡೆ ☐ ಮೀಟರ್
3. ಅಲಮಾರಿ ☐ ಮೀಟರ್
4. ಕಿಟಕಿ ☐ ಮೀಟರ್
5. ನೆಲ ☐ ಮೀಟರ್

ಮಾಡಿ ನೋಡೋಣ

- ಇರುವೆಗಳು, ಬಣ್ಣದ ಚಿಟ್ಟೆಗಳು, ಜೇನುನೊಣಗಳು ಮುಂತಾದವುಗಳು ಸಾಮಾನ್ಯವಾಗಿ ಕಂಡು ಬರುವ ಕೀಟಗಳಾಗುತ್ತವೆ.
- ಕೀಟಗಳು 6 ಕಾಲುಗಳು, 4 ರೆಕ್ಕೆಗಳು ಮತ್ತು 2 ಆಂಟೆನಾಗಳನ್ನು ಹೊಂದಿರುವ ಸಣ್ಣ ಜೀವಿಯಾಗಿದೆ.
- ಇವುಗಳ ದೇಹದ ರಚನೆ ತಲೆ, ಎದೆ, ಹೊಟ್ಟೆ ಎಂದು ಮೂರು ಭಾಗಗಳನ್ನು ಹೊಂದಿದೆ.
- ಕೆಲವು ಕೀಟಗಳಿಗೆ ರೆಕ್ಕೆಗಳು ಇಲ್ಲ ಉದಾಹರಣೆಗೆ ಹೇನು, ತಿಗಣೆ.
- ಎಲ್ಲಾ ಸಣ್ಣ ಜೀವಿಗಳೂ ಕೀಟಗಳು ಅಲ್ಲ! ಉದಾಹರಣೆಗೆ ಜೇಡ, ಸಹಸ್ರಪದಿ ಲೈಫ್....

ಸಣ್ಣ ಜೀವಿಗಳೆಲ್ಲವು ಕೀಟಗಳು ಅಲ್ಲ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳುವಂತೆ ಮಾಡುವುದು.

ಕೀಟಗಳ ದೇಹದ ಭಾಗಗಳು



- ಇರುವೆಗಳು ತಮ್ಮೊಳಗೆ ಮಾಹಿತಿಗಳನ್ನು ಹಂಚಿಕೊಳ್ಳುತ್ತವೆ. ಒಂದು ಇರುವೆಯಿಂದ ಹೊರಹಾಕಲ್ಪಟ್ಟ ವಾಸನೆ ದ್ರವವನ್ನು ಸಹ ಇರುವೆಗಳು ಅನುಸರಿಸುತ್ತವೆ.

- ಬಣ್ಣದ ಚಿಟ್ಟೆ, ಹೂವುಗಳಿಂದ ಮಕರಂಧವನ್ನು ಹೀರುವ ಮೆದುಗೊಳವೆ ಎಂಬ ಉದ್ದವಾದ ಕೊಳವೆಯನ್ನು ಹೊಂದಿದೆ.
- ಜೇನುನೊಣಗಳು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಅದರ ಕೊಕ್ಕು ಸಹಾಯ ಮಾಡುತ್ತದೆ. ಜೇನುನೊಣಗಳು ಕಚ್ಚಿದರೆ ತುಂಬಾ ನೋವಿನಿಂದ ಕೂಡಿರುತ್ತದೆ. ಆದ್ದರಿಂದ "ಜೇನುನೊಣಗಳಿಗೆ ತೊಂದರೆ ಮಾಡಬಾರದು".

ಮಾಡಿ ಕಲಿಯೋಣ

1. ಜೇನುನೊಣದ ಭಾಗಗಳನ್ನು ಗುರುತಿಸಿ.



2. ಬಣ್ಣದ ಚಿಟ್ಟೆ, ಇರುವೆ, ಜೇನುನೊಣಗಳು ಮುಂತಾದವುಗಳ ದೇಹದ ಭಾಗಗಳನ್ನು ಹೋಲಿಸಿ ಅವುಗಳ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

ಕೀಟಗಳು	ಬಣ್ಣದ ಚಿಟ್ಟೆ	ಇರುವೆ	ಜೇನುನೊಣಗಳು
ಹೋಲಿಕೆಗಳು			
ವ್ಯತ್ಯಾಸಗಳು			

ಈ ರೀತಿ ಕೋಷ್ಟಕವನ್ನು ಉಪಯೋಗಿಸಿ ಹೋಲಿಕೆ ವ್ಯತ್ಯಾಸಗಳನ್ನು ಬರೆಯಲು ಮಕ್ಕಳಿಗೆ ಸಹಾಯ ಮಾಡುವುದು

3. ರೆಕ್ಕೆಗಳ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿ ಚಿತ್ರ ಬಿಡಿಸಿ.



ಡ್ರ್ಯಾಗನ್ ಚಿಟ್ಟೆ

ಮಿಂಚು ಹುಳು

ನೀವು ಈ ಕೀಟಗಳನ್ನು ನೋಡಿದ್ದೀರಾ?

ಎಲೆ ಕೀಟ



ಕಡ್ಡಿ ಕೀಟ

4. ಇದು ಕೀಟವೇ ಅಥವಾ ಕೀಟವಲ್ಲವೇ ಎಂದು ಬರೆಯಿರಿ.



6 ಕಾಲುಗಳು
3 ದೇಹದ ಭಾಗಗಳು
4 ರೆಕ್ಕೆಗಳು
2 ಆಂಟೆನಗಳು

ಡ್ರ್ಯಾಗನ್ ಚಿಟ್ಟೆ ಒಂದು _____ .

8 ಕಾಲುಗಳು
2 ದೇಹದ ಭಾಗಗಳು
ರೆಕ್ಕೆಗಳು ಇಲ್ಲ
ಆಂಟೆನಗಳು ಇಲ್ಲ

ಜೇಡ ಒಂದು _____ .

5. ಸಣ್ಣ ಜೀವಿಗಳ ಹೆಸರುಗಳನ್ನು ಬರೆ ಕೀಟಗಳನ್ನು ಕಂಡುಹಿಡಿದು (✓) ಗುರುತು ಹಾಕು.

ಇರುವೆ	ಡ್ರ್ಯಾಗನ್ ಚಿಟ್ಟೆ	ಮಿಡತೆ
ಜೇನುನೊಣ	ಸಹಸ್ರಪದಿ	ಎರೆಹುಳು
ಸೊಳ್ಳೆ	ಜಿರಳೆ	ಕೆಂಪು ಜೀರುಂಡೆ

ಕೀಟಗಳಿಗೆ...

1. _____.

2. _____.

3. _____.

ಕೀಟಗಳಿಗೆ ತೊಂದರೆ ಮಾಡಬೇಡಿ.

6. ಪಟ್ಟಿಯನ್ನು ಪೂರ್ತಿ ಮಾಡಿ.

ಕೆಂಪು ಜೀರುಂಡೆ

ಶತಪದಿ

ನೋಣ

ಮಿಂಚು ಹುಳು

ಸಹಸ್ರಪದಿ

ಸೊಳ್ಳೆ

ಕ್ರ.ಸಂ	ಕೀಟಗಳು	ರೆಕ್ಕೆಗಳ ಸಂಖ್ಯೆ	ಕಾಲುಗಳ ಸಂಖ್ಯೆ
1.	ಶತಪದಿ	ಇಲ್ಲ	ಹಲವು
2.	ಜೀರುಂಡೆ		
3.	ನೊಣ		
4.	ಮಿಂಚು ಹುಳು		
5.	ಸಹಸ್ರಪದಿ		
6.	ಸೊಳ್ಳೆ		

ಬಣ್ಣದ ಚಿಟ್ಟೆ, ಪತಂಗ ಇವು ಎರಡು ನೋಡುವುದಕ್ಕೆ ಒಂದೇ ರೀತಿಯಾಗಿ ಇದ್ದರೂ ಬೇರೆ ಬೇರೆ ಕೀಟಗಳು.

ಪತಂಗ	ಬಣ್ಣದ ಚಿಟ್ಟೆ
ಸಾಮಾನ್ಯವಾಗಿ ಪತಂಗ ಬಿಳಿ ಹಳದಿ ಅಥವಾ ಬೂದು ಬಣ್ಣದಲ್ಲಿ ಇರುತ್ತದೆ.	ಬಣ್ಣದ ಚಿಟ್ಟೆಗಳು ಪ್ರಕಾಶಮಾನವಾಗಿ ವರ್ಣಮಯವಾಗಿ ಇರುತ್ತವೆ.
ಬಹು ಪಾಲು ರಾತ್ರಿಯಲ್ಲಿ ಕೆಲಸ ಮಾಡುತ್ತದೆ.	ಬಹು ಪಾಲು ಹಗಲಿನಲ್ಲಿ ಇರುತ್ತವೆ.
ವಿಶ್ರಾಂತಿಯಲ್ಲಿ ಇದ್ದಾಗ ರೆಕ್ಕೆಗಳನ್ನು ಸಮವಾಗಿ ಹರಡಿರುತ್ತದೆ.	ವಿಶ್ರಾಂತಿಯಲಿ ಇರುವಾಗ ರೆಕ್ಕೆಗಳನ್ನು ಒಟ್ಟಾಗಿ ಸೇರಿಸಿ ಮೇಲೆ ನೋಡುವಂತೆ ಇಟ್ಟಿರುತ್ತದೆ.

ಕೀಟಗಳ ಜೀವನ ಚಕ್ರ

ಸೂಕ್ಷ್ಮವಾಗಿ ಗಮನಿಸಿ ಚರ್ಚಿಸೋಣ

ಇರುವೆಯ ಜೀವನ ಚಕ್ರ

1 ಮೊಟ್ಟೆಗಳು
ಇರುವೆ ತನ್ನ ಗೂಡಿನಲ್ಲಿ ಅಧಿಕವಾಗಿ ಚಿಕ್ಕ ಬಿಳಿ ಬಣ್ಣದ ಮೊಟ್ಟೆಗಳನ್ನು ಇಡುತ್ತದೆ.



2 ಲಾರ್ವ
ಇದು ಮೃದುವಾದ ಹುಳುವಿನಂತಿರುವುದು. ಈ ಸ್ಥಾನದಲ್ಲಿ ಅಧಿಕವಾಗಿ ಆಹಾರವನ್ನು ತಿಂದು ಹುಳು ಬೆಳವಣಿಗೆಯಾಗುತ್ತದೆ.

3 ಜಂಟಿ ಹುಳು (Pupa)
ಲಾರ್ವ ರಕ್ಷಣಾತ್ಮಕ ಕವಚದೊಳಗೆ ಜಂಟಿ ಹುಳುವಾಗಿ ರೂಪಾಂತರಗೊಳ್ಳುತ್ತದೆ.

4 ವಯಸ್ಕ ಇರುವೆ
ಜಂಟಿ ಹುಳು ಸ್ಥಾನದಿಂದ ಪೂರ್ಣವಾಗಿ ಬೆಳೆದು ಇರುವೆಯಾಗಿ ಹೊರಗೆ ಬರುವುದು.

ಬಣ್ಣದ ಚಿಟ್ಟೆಯ ಜೀವನ ಚಕ್ರ

1 ಮೊಟ್ಟೆ
ಬಣ್ಣದ ಚಿಟ್ಟೆ, ಎಲೆ ಕೆಳಭಾಗದಲ್ಲಿ ತುಂಬಾ ಚಿಕ್ಕ ಮೊಟ್ಟೆಗಳನ್ನು ಇಡುತ್ತದೆ.

2 ಲಾರ್ವ
ಮೊಟ್ಟೆಯಿಂದ ಕಂಬಳಿ ಹುಳು ಹೊರಗೆ ಬರುವುದು. ಇವುಗಳು ಎಲೆಗಳನ್ನು ತಿಂದು ವೇಗವಾಗಿ ಬೆಳೆಯುತ್ತದೆ.



3 ವಯಸ್ಕ ಚಿಟ್ಟೆ
ಜಂಟಿ ಹುಳು ಸ್ಥಾನದಿಂದ ಪೂರ್ಣವಾಗಿ ಬೆಳೆದು ಬಣ್ಣದ ಚಿಟ್ಟೆಯಾಗಿ ಹೊರಬರುವುದು.

4 ಜಂಟಿ ಹುಳು
ಲಾರ್ವ ರಕ್ಷಣಾತ್ಮಕ ಕವಚದೊಳಗೆ ಜಂಟಿ ಹುಳುವಾಗಿ ಬದಲಾಗುತ್ತದೆ.

ಮಾಡಿ ಕಲಿಯೋಣ

1. ಜೀವನ ಚಕ್ರದಲ್ಲಿರುವ ಹಂತಗಳನ್ನು ಕ್ರಮಪಡಿಸಿ ಸೇರಿಸಿ.





2.ಬಣ್ಣದ ಚಿಟ್ಟೆಯ ಜೀವನಚಕ್ರದ ಹಂತಗಳನ್ನು ಚಿತ್ರ ಬಿಡಿಸಿ ಬರೆಯಿರಿ.



ಬಣ್ಣದ ಚಿಟ್ಟೆಗಳು ಕಾಲುಗಳಿಂದ ರುಚಿಯನ್ನು ತಿಳಿಯುತ್ತದೆ.

ಸೂಕ್ಷ್ಮವಾಗಿ ಗಮನಿಸಿ ಚರ್ಚಿಸೋಣ

ವಯಸ್ಕ ಜೀವಿಗಳೊಂದಿಗೆ ಮರಿ ಜೀವಿಗಳನ್ನು ಹೋಲಿಸು.

ನಾಯಿ

ನಾಯಿ ಮರಿ

ಬಣ್ಣದ ಚಿಟ್ಟೆ

ಲಾರ್ವ

ಕೋಳಿ

ಕೋಳಿ ಮರಿ

ಇರುವೆ

ಲಾರ್ವ

ಕೀಟಗಳು ವಯಸ್ಕ ಮತ್ತು ಚಿಕ್ಕ ಕೀಟಗಳು ಒಂದೇ ರೀತಿ ಕಾಣುತ್ತವೆಯೇ?

ಕೀಟಗಳ ಮರಿಕೀಟಗಳು ವಯಸ್ಕ ಕೀಟಗಳು ಒಂದೇ ರೀತಿಯಾಗಿ ಇವೆಯೇ?

ಉಪಯುಕ್ತ ಮತ್ತು ಹಾನಿಕಾರಕ ಕೀಟಗಳು

ಮನೆಯಲ್ಲಿ ಪ್ರಯತ್ನ ಮಾಡಿ ನೋಡು.

ಮನೆಯ ಹೊರಗೆ ಸ್ವಲ್ಪ ಆಹಾರ ಪದಾರ್ಥಗಳನ್ನು ತೆರೆದ ಸ್ಥಳದಲ್ಲಿ ಇಡುವುದು. ಆ ಆಹಾರವನ್ನು ಹುಡುಕಿ ಬರುವ ಕೀಟಗಳನ್ನು ಗಮನಿಸಿ ಅವುಗಳನ್ನು ಪಟ್ಟಿ ಮಾಡು.

1. _____

2. _____

3. _____

ಜೇನುನೊಣ, ಬಣ್ಣದ ಚಿಟ್ಟೆ, ಇರುವೆ ಮುಂತಾದ ಕೆಲವು ಕೀಟಗಳು ನಮಗೆ ಸಹಾಯಕವಾಗಿದೆ. ಸೊಳ್ಳೆ, ನೊಣ, ಮಿಡತೆ, ಹೇನು, ಜಿರಳೆ ಮುಂತಾದ ಕೆಲವು ಕೀಟಗಳು ಹಾನಿಯನ್ನುಉಂಟು ಮಾಡುತ್ತವೆ.

ಡ್ರಾಗನ್ ಚಿಟ್ಟೆ ಎರೆಹುಳು ರೈತನ ಮಿತ್ರರು ಏಕೆ?

ಮಿಡತೆ _ ಬೆಳೆ ಭಕ್ಷಕ

- ಮಿಡತೆಗಳು ಹುಲ್ಲು ಸಸ್ಯಗಳಲ್ಲಿ ವಾಸಿಸುತ್ತವೆ.
- ಇವುಗಳು ಎಲೆಗಳನ್ನು ತಿಂದು ಅಧಿಕವಾಗಿ ಬೆಳೆಗಳನ್ನು ನಾಶಪಡಿಸುತ್ತವೆ.

ಸೊಳ್ಳೆ – ರೋಗವಾಹಕಗಳು

1. ಸೊಳ್ಳೆ, ನಿಂತ ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತದೆ.
2. ಸೊಳ್ಳೆಗಳು ತನ್ನ ಹೀರುವ ಕೊಳವ ಮೂಲಕ ಚರ್ಮವನ್ನು ಚುಚ್ಚುವ ಮೂಲಕ ರಕ್ತವನ್ನು ಹೀರುತ್ತವೆ.
3. ಸೊಳ್ಳೆಗಳು ಮಲೇರಿಯಾ ಡೆಂಗು ಜ್ವರ ಮುಂತಾದ ರೋಗಗಳನ್ನು ಹರಡುತ್ತದೆ.



ರೋಗ ತಡೆಗಟ್ಟುವಿಕೆ

ನೀರು ನಿಂತಿರುವುದನ್ನು ತಪ್ಪಿಸಿ ನಿಮ್ಮ ಸುತ್ತಮುತ್ತ ಪರಿಸರವನ್ನು ಶುದ್ಧವಾಗಿ ಒಣಗಿರುವಂತೆ ಇಟ್ಟುಕೊಳ್ಳುವುದು.

ಸೊಳ್ಳೆ ಕಚ್ಚುವುದನ್ನು ತಪ್ಪಿಸಲು ಸೊಳ್ಳೆಗಳ ಬಲೆಯನ್ನು ಉಪಯೋಗಿಸುವುದು.

ಬಾಗಿಲು ಕಿಟಕಿಗಳನ್ನು ಮುಚ್ಚಿಕೊಳ್ಳುವುದು ಅಥವಾ ಸೊಳ್ಳೆಗಳ ಬಲೆಯನ್ನು ಮುಚ್ಚುವುದು.



ನೀರು ನಿಂತುಕೊಳ್ಳುವುದಕ್ಕೆ ಕಾರಣಗಳು, ಅವುಗಳನ್ನು ತಡೆಯುವ ಮಾರ್ಗಗಳನ್ನು ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುವುದು.

ಕಲಿಕಾ ಪಯಣ

1. ಕೆಳಕಂಡವುಗಳನ್ನು ವರ್ಗೀಕರಿಸಿ.

ಜೇನುನೊಣ, ಜೇಡ, ಬಣ್ಣದ ಚಿಟ್ಟೆ, ಎರೆಹುಳು, ಇರುವೆ, ಸಹಸ್ರಪದಿ, ನೊಣ, ಶತಪದಿ

ಕೀಟಗಳು	ಕೀಟಗಳಲ್ಲದ್ದು

2. ಸೂಚನೆಗಳನ್ನು ಓದಿ ಸರಿಯಾದ ರೇಖಾ ಚಿತ್ರಗಳನ್ನು ಆಯ್ಕೆ ಮಾಡಿ ಬಿಡಿಸಿ.

ಅ) ನನಗೆ ವರ್ಣಮಯವಾದ ರೆಕ್ಕೆಗಳು ಇವೆ
ಒಂದು ಹೂವಿನಿಂದ ಮತ್ತೊಂದು ಹೂವಿಗೆ ಹಾರುವೆನು.
ಹೂವುಗಳಿಂದ ಮಕರಂಧವನ್ನು ಹೀರುವೆನು ನಾನು ಮೊಟ್ಟೆಯಿಂದ ಮರಿಕೀಟವಾಗಿ ಹೊರ ಬರುವೆನು.
ನಾನು ಯಾರು? _____



ಆ) ನಾನು ಸಣ್ಣ ಜೀವಿ.
ನಾನು ಗುಂಪಾಗಿ ಸೇರಿ ಕೆಲಸ ಮಾಡುವೆನು. ನಾನು ನನಗಿಂತ ಹೆಚ್ಚು ಆಹಾರವನ್ನು ಹೊರುವೆನು.. ನನಗೆ ಸಿಹಿಯಾದ ವಸ್ತುಗಳು ಇಷ್ಟ.
ನಾನು ಯಾರು? _____

ಇ) ನಾನು ಹಾರುವ ಸಣ್ಣ ಕೀಟ.
ನಾನು ಮನುಷ್ಯರನ್ನು ಪ್ರಾಣಿಗಳನ್ನು ಕಚ್ಚುವೆನು, ನಾನು ರಕ್ತವನ್ನು ಹೀರುವೆನು ನಾನು ರೋಗಗಳನ್ನು ಹರಡುವೆನು.
ನಾನು ಯಾರು? _____

3. ಪ್ರಯೋಜನಕಾರಿ ಮತ್ತು ಹಾನಿಕಾರಕವಾದ ಕೀಟಗಳನ್ನು ಕಂಡುಹಿಡಿಯಿರಿ ಗುರುತಿಸಿ.

ಕ್ರ.ಸಂ	ಕೀಟ	ಹಾನಿಕಾರಕ ಕೀಟ	ಪ್ರಯೋಜನಕಾರಿ ಕೀಟ
1.	ಬಣ್ಣದ ಚಿಟ್ಟೆ		
2.	ಸೊಳ್ಳೆ		
3.	ಜೇನುನೊಣ		
4.	ಮಿಡತೆ		
5.	ಇರುವೆ		

4. ಬಣ್ಣದ ಚಿಟ್ಟೆಯ ಜೀವನ ಚಕ್ರದ ಹಂತಗಳನ್ನು ಬರೆಯಿರಿ.



ನಾನು ಕಲಿತದ್ದು

- ನನ್ನಿಂದ ಒಂದು ಕೀಟವನ್ನು ಗುರುತಿಸಲು ಸಾಧ್ಯ.
- ಇರುವೆ, ಬಣ್ಣದ ಚಿಟ್ಟೆ, ಜೇನುನೊಣ ಮುಂತಾದವುಗಳ ಕೆಲವು ಗುಣಗಳ ಬಗ್ಗೆ ವಿವರಿಸಿವೆನು.
- ಕೆಲವು ಕೀಟಗಳ ಜೀವನ ಚಕ್ರಗಳನ್ನು ನನ್ನಿಂದ ಚಿತ್ರ ಬಿಡಿಸಿ ಹೆಸರಿಸುವುದಕ್ಕೆ ಸಾಧ್ಯ.
- ಪ್ರಯೋಜನಕಾರಿ ಮತ್ತು ಹಾನಿಕಾರಕವಾದ ಕೀಟಗಳನ್ನು ವರ್ಗೀಕರಿಸುವೆನು.
- ಕೀಟಗಳ ಹೋಲಿಕೆ ಮತ್ತು ವ್ಯತ್ಯಾಸಗಳ ಆಧಾರದ ಮೇಲೆ ನನ್ನಿಂದ ಹೋಲಿಸಲು ಸಾಧ್ಯ.

ನಾನೇ ಮಾಡುವೆನು

1. ಸರಿಯಾದ ಉತ್ತರವನ್ನು ಬರೆಯಿರಿ.

ನಾನು ಒಂದು ಇರುವೆ.

ನಾನು _____ ಕಾಲುಗಳನ್ನು ಹೊಂದಿದ್ದೇನೆ.

ನಾನು ಸಹ ಇರುವೆಗಳೊಂದಿಗೆ _____ ವಾಸಿಸುತ್ತೇನೆ.

ನಾನು ಒಂದು _____.

2. ಗುಂಪಿಗೆ ಸೇರದೆ ಇರುವುದಕ್ಕೆ ವೃತ್ತ ಹಾಕಿ, ಅದರ ಹೆಸರನ್ನು ಬರೆಯಿರಿ.

_____

3. ಇರುವೆಯ ಜೀವನ ಚಕ್ರದ ಹಂತಗಳನ್ನು ಬರೆಯಿರಿ.



_____ _____

_____ _____

ಜಂಟಿ ಹುಳು,ವಯಸ್ಕ ಇರುವೆ, ಮೊಟ್ಟೆಗಳು,ಲಾರ್ವ

4. ಮೌಖಿಕ ಪ್ರಶ್ನೆ

ಕೀಟಗಳು ನಮಗೆ ಪ್ರಯೋಜನಕಾರಿ ಮತ್ತು ಹಾನಿಕಾರಕವಾದವುಗಳು ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

5. ಕಾರ್ಯ ಯೋಜನೆ

ನಿಮ್ಮ ಮನೆಯ ಸುತ್ತ, ಶಾಲಾ ತೋಟದ ಸುತ್ತ ಕಂಡು ಬರುವ ಕೀಟಗಳನ್ನು ಗಮನಿಸಿ.

ಅ) ನೀವು ನೋಡಿದ ಒಂದು ಕೀಟದ ಚಿತ್ರ ಬಿಡಿಸಿ, ಕೆಳಕಂಡ ವಾಕ್ಯಗಳನ್ನು ಪೂರ್ತಿ ಮಾಡಿ.

1. ಕೀಟದ ಹೆಸರು _____

2. ಅದನ್ನು ನೀವು ಎಲ್ಲಿ ನೋಡಿದ್ದೀರಾ? _____

3. ಅದು ಏನು ಮಾಡುತ್ತಿತ್ತು? _____

ಆ) ಸೊಳ್ಳೆ ಅಥವಾ ನೊಣ ಮುಂತಾದ ಹಾನಿಕರವಾದ ಕೀಟಗಳ ಬಗ್ಗೆ ಜಾಗೃತಿ ಬಿತ್ತಿಪತ್ರಗಳನ್ನು ತಯಾರಿಸಿ.

ನಿಮ್ಮ ಬಿತ್ತಿಪತ್ರಗಳಲ್ಲಿ ಇರಬೇಕಾದ ವಿಷಯ:

1. ಕೀಟದ ಹೆಸರು
2. ಅದರಿಂದ ಏರ್ಪಡುವ ತೊಂದರೆಗಳು
3. ಅವುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವ ಒಂದು ಮಾರ್ಗ

ಕಲಿಕಾ ಪಯಣ

- ಸಾಮಾನ್ಯವಾಗಿ ಕಂಡುಬರುವ ಸಣ್ಣ ಕೀಟಗಳ ಜೀವನ ಚಕ್ರವನ್ನು ಅರ್ಥ ಮಾಡಿಕೊಳ್ಳುವುದು.
- ಕೀಟಗಳ ಗುಣಗಳನ್ನು ಪರಿಸರದಲ್ಲಿ ಅವುಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುವುದು.
- ಸುರಕ್ಷಿತ ನಡತೆಗಳನ್ನು ಅನುಸರಿಸುವುದು ಮತ್ತು ಅಸುರಕ್ಷಿತ ಸನ್ನಿವೇಶಗಳಲ್ಲಿ ಸುರಕ್ಷಿತ ಮಾರ್ಗಗಳನ್ನು ಅನುಸರಿಸುವುದು.
- ಹಲವಾರು ಸನ್ನಿವೇಶಗಳಲ್ಲಿ ಸುರಕ್ಷಿತ ಮತ್ತು ಅಸುರಕ್ಷಿತ ನಡತೆಗಳನ್ನು ಭಾವಿಸುವುದು.
- ದೈನಂದಿನ ಜೀವನದ ಕೆಲಸಗಳಲ್ಲಿ ಸರಿಯಾದ ದೇಹದ ಭಂಗಿಯನ್ನು ಅನುಸರಿಸುವುದು.
- ಹಲವಾರು ವಿಧದ ಕೀಲುಗಳು ಬೇರೆ ಬೇರೆ ದೇಹದ ಚಲನೆಗಳಲ್ಲಿ ಅವುಗಳ ಉಪಯೋಗವನ್ನು ಕಂಡು ಹಿಡಿಯುವುದು.

ಮೂರನೇ ತರಗತಿ

ಅವಧಿ - I

ಸಮಾಜ ವಿಜ್ಞಾನ

ಮುನ್ನುಡಿ

ತಮಿಳುನಾಡು ಪಠ್ಯಪುಸ್ತಕ ಮತ್ತು ಶೈಕ್ಷಣಿಕ ಸೇವೆಗಳ ನಿಗಮವು ಟಿಎನ್ ಸಿಎಫ್ 2025 ರ ಹೊಸ ಪಠ್ಯಕ್ರಮದ ಆಧಾರದ ಮೇಲೆ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕವನ್ನು ಸಿದ್ಧಪಡಿಸಿದೆ ಈ ಪಠ್ಯಪುಸ್ತಕವು ಮಕ್ಕಳ ದೈನಂದಿನ ಜೀವನದ ಅನುಭವಗಳೊಂದಿಗೆ ಕಲಿಕೆಯ ಬೆರೆಯುವ ಗುರಿಯನ್ನು ಹೊಂದಿದೆ.

ಈ ಪಠ್ಯಪುಸ್ತಕವು ತಮಿಳುನಾಡು ಶಿಕ್ಷಣ ನೀತಿಯಲ್ಲಿ ಶಿಫಾರಸು ಮಾಡಿದಂತೆ ಎಲ್ಲರನ್ನು ಒಳಗೊಳ್ಳುವಿಕೆ ಸಂವಿಧಾನಿಕ ಮೌಲ್ಯಗಳನ್ನು ಪಾಲಿಸುವುದು. ವಯಸ್ಸಿನ ಅನುಗುಣವಾಗಿ ಜಾತಿ, ಲಿಂಗ ಮತ್ತು ವೈವಿಧ್ಯತೆ ಬಗ್ಗೆ ಜಾಗೃತ ತಿಳುವಳಿಕೆಯನ್ನು ಬೆಳೆಸುವುದು, ಸ್ಥಳ ಪರಂಪರೆಯನ್ನು ಸಂಯೋಜಿಸಿ ಅರ್ಥ ಮಾಡಿಕೊಳ್ಳುವುದು ಪರಿಸರ ಸಾಕ್ಷರತೆ, 21ನೇ ಶತಮಾನದ ಕೌಶಲ್ಯಗಳು ಮತ್ತು ಸಾಮಾಜಿಕ ಭಾವನಾತ್ಮಕ ಕಲಿಕೆಯನ್ನು ಬಲಗೊಂಡಿದೆ.

ಕಲಿಕೆಯ ಪ್ರಗತಿ

ಸಮಾಜ ವಿಜ್ಞಾನ ಪಠ್ಯಪುಸ್ತಕವು ಕಲಿಯುವ ವರ ಜೀವನಕ್ಕೆ ಹತ್ತಿರವಿರುವ ಅವರ ಸ್ವಯಂ ಗುರುತು ಕುಟುಂಬ, ತರಗತಿ ಮತ್ತು ಸುತ್ತಮುತ್ತಲಿನ ಪರಿಸರದಂತಹ ವಿಷಯಗಳೊಂದಿಗೆ ಪ್ರಾರಂಭವಾಗುತ್ತದೆ. ಹಂತ ಹಂತವಾಗಿ ಇದು ಸಾಮಾಜಿಕ ಸಂಸ್ಥೆಗಳು, ಸಾಂಸ್ಕೃತಿಕ ಆಚರಣೆಗಳು ಮತ್ತು ನೈಸರ್ಗಿಕಪರಿಸರ ದಂತಹ ವಿಶಾಲವಾದ ವಿಷಯಗಳನ್ನು ವಿವರಿಸುತ್ತದೆ.

ಘಟಕ ಒಂದು 1: ಸುಮತಿಯ ಸ್ನೇಹಿತರು

- ಒಬ್ಬರ ಸಾಮರ್ಥ್ಯಗಳು ಆಸಕ್ತಿಗಳು ಮತ್ತು ಪ್ರತಿಭೆಗಳನ್ನು ಗುರುತಿಸುವುದು.
- ಕುಟುಂಬದ ಸದಸ್ಯರ ಕೊಡುಗೆಗಳನ್ನು ಅರ್ಥಮಾಡಿಕೊಳ್ಳುವುದು.
- ತರಗತಿಯಲ್ಲಿ ಸಹಾಯಕವಾದ ನಡವಳಿಕೆಗಳನ್ನು ಗುರುತಿಸುವುದು.

ಘಟಕ ಎರಡು 2: ಸುಮತಿಯ ಪಟ್ಟಣದಲ್ಲಿ

- ತಮ್ಮ ತಕ್ಷಣದ ಸುತ್ತಮುತ್ತಲಿನ ಜನರು ಮತ್ತು ಸ್ಥಳಗಳನ್ನು ಗುರುತಿಸುವುದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಂಥಾಲಯ ಮತ್ತು ಪೊಲೀಸ್ ಠಾಣೆಗಳಂತಹ ಹತ್ತಿರದ ಪ್ರದೇಶಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವುದು.
- ನಮ್ಮ ದೈನಂದಿನ ಜೀವನಕ್ಕೆ ಅತ್ಯಗತ್ಯವಾಗಿರುವ ಸಾಮಾಜಿಕ ಆರೈಕೆ ಒದಗಿಸುವವರ ಕೆಲಸವನ್ನು ಗುರುತಿಸುವುದು.

ಪಠ್ಯಪುಸ್ತಕದ ಪ್ರಮುಖ ಲಕ್ಷಣಗಳು

- ವಿದ್ಯಾರ್ಥಿಗಳ ದೃಷ್ಟಿಕೋನಗಳನ್ನು ಗೌರವಿಸುವುದು.
- ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಅವಕಾಶಗಳನ್ನು ಒದಗಿಸುವುದು.
- ತರಗತಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

ಚರ್ಚಿಸಿ ಮತ್ತು ಕಲಿಯಿರಿ

- ತೀವ್ರವಾಗಿ ಗಮನಿಸಿ ಮತ್ತು ಚರ್ಚಿಸಿ.
- ಪ್ರಶ್ನೆಗಳ ಮೂಲಕ ಚರ್ಚಿಸಿ.
- ಸಂಬಂಧಗಳನ್ನು ಕಲ್ಪಿಸುವ ಮೂಲಕ ಚರ್ಚಿಸಿ.

ಹಂಚಿಕೊಳ್ಳೋಣ

- ವೈವಿಧ್ಯತೆಯನ್ನು ಗೌರವಿಸುವುದು.
- ತನ್ನನ್ನು ಇತರರಸ್ಥಾನದಲ್ಲಿರಿಸಿ ಯೋಚಿಸುವುದು.
- ತನ್ನ ಅಭಿಪ್ರಾಯಗಳನ್ನು ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವುದು.

ಬನ್ನಿ ಚಿತ್ರ ಬಿಡಿಸೋಣ / ಬನ್ನಿ ಆಡೋಣ / ಬನ್ನಿ ನಟಿಸೋಣ

- ಕಲೆಗಳ ಸಂಯೋಜನೆ.
- ಸೃಜನಶೀಲತೆ.
- ಒಟ್ಟಾಗಿ ಕಲಿಯುವುದು.

ಬನ್ನಿ ಬರೆಯೋಣ

- ಸಂವಹನ.
- ಘಟನೆಗಳ ಅನುಕ್ರಮ.
- ಆಲೋಚನೆಗಳನ್ನು ಪ್ರತಿಬಿಂಬಿಸುವುದು.

ಸಾಮರ್ಥ್ಯ ಆಧರಿತ ಸಮಗ್ರಹ ಮೌಲ್ಯಮಾಪನ

ಮೌಲ್ಯಮಾಪನವು ಕೇವಲ ಕಂಠಪಾಠಕಿಂತ ಹೆಚ್ಚಾಗಿ ವೀಕ್ಷಣೆ ಭಾಗವಹಿಸುವಿಕೆ ಮತ್ತು ಸರಳ ಪ್ರತಿಫಲಿತ ಚಟುವಟಿಕೆಗಳ ಆಧಾರದ ಮೇಲೆ ಸಾಮರ್ಥ್ಯ ಆಧಾರಿತ ಸಮಗ್ರ ಮೌಲ್ಯಮಾಪನವಾಗಿರಲು ಉದ್ದೇಶಿಸಲಾಗಿದೆ.

ಕಲಿಕೆಯ ಮೌಲ್ಯಮಾಪನ

ಪ್ರತಿ ಪ್ರಮುಖ ಪಠ್ಯ ವಸ್ತುವಿನ ನಂತರ

- ಲಿಖಿತ ಪರೀಕ್ಷೆ
- ಮೌಖಿಕ ಪರೀಕ್ಷೆ
- ಕಾರ್ಯಯೋಜನೆ ಎಂಬ ವಿವಿಧ ಮೌಲ್ಯಮಾಪನ ವಿಧಾನಗಳನ್ನು ಬಳಸಿ ಮೌಲ್ಯಮಾಪನ ಮಾಡಿ.

ಸ್ವಯಂ ಮೌಲ್ಯಮಾಪನ

ಪ್ರತಿಘಟ್ಟದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಪ್ರಗತಿಯನ್ನು ಸ್ವಯಂ ಮೌಲ್ಯಮಾಪನ ಮಾಡಲು ಅವಕಾಶಗಳನ್ನು ನೀಡಲಾಗುತ್ತದೆ.

ಈ ಅಡಿಪಾಯದ ಹಂತದಲ್ಲಿ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ವ್ಯವಸ್ಥಿತ ವಿಧಾನದೊಂದಿಗೆ ಗಮನಿಸಲು ಪ್ರಶ್ನೆಗಳನ್ನು ಎತ್ತಲು ಮತ್ತು ಅವುಗಳ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಪ್ರಾರಂಭಿಸುತ್ತಾರೆ ಈ ಸಮಾಜ ವಿಜ್ಞಾನ ಪಠ್ಯಪುಸ್ತಕವು ಮಕ್ಕಳ ಸಾಮಾಜಿಕ ಕುತೂಹಲ ವೈವಿಧ್ಯತೆಗೆ ಬಗ್ಗೆ ಮೆಚ್ಚುಗೆ ಮತ್ತು ಸಮಾಜ ಹಾಗೂ ಪರಿಸರದ ಬಗ್ಗೆ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಪರಿವಿಡಿ

ಘಟಕ – 1

ಸುಮತಿ ಮತ್ತು ಗೆಳೆಯರು

ಸುಮತಿಯ ಕುಟುಂಬ	139
ಮುಗಿಲನ್ ಕುಟುಂಬ	145
ಬಾನುವಿನ ಕುಟುಂಬ	147
ನನ್ನ ತರಗತಿ	150





ಘಟಕ – 2

ಸುಮತಿಯ ಊರಿನಲ್ಲಿ...	156
ಪ್ರಾರ್ಥಮಿಕ ಆರೋಗ್ಯ ಕೇಂದ್ರದಲ್ಲಿ...	161
ಗ್ರಂಥಾಲಯದಲ್ಲಿ...	163
ತುರ್ತು ಸಹಾಯಕ್ಕಾಗಿ...	167
ಜನರನ್ನು ರಕ್ಷಿಸಲು...	169

ಇ ಪುಸ್ತಕ

ಐ ಪುಸ್ತಕ

ಘಟಕ
1

ಸುಮತಿ ಮತ್ತು ಗೆಳೆಯರು

ಸುಮತಿ

ಮುಗಿಲನ್

ಬಾನು

ಸುಮತಿ, ಮುಗಿಲನ್ ಮತ್ತು ಬಾನು ಗೆಳೆಯರು. ಅವರು ಮೂರನೇ ತರಗತಿಯಲ್ಲಿ ಓದುತ್ತಿದ್ದಾರೆ. ಕಡಲೂರಿನಲ್ಲಿ ವಾಸಿಸುತ್ತಿದ್ದಾರೆ.

ಸುಮತಿಯ ಕುಟುಂಬ

ಚರ್ಚಿಸಿ ಕಲಿಯೋಣ



ಮಕ್ಕಳ ವಿಶಿಷ್ಟ ಪ್ರತಿಭೆ ಮತ್ತು ಆಸಕ್ತಿಗಳು ಹೇಗೆ ಗುರುತಿಸುವುದು ಮತ್ತು ಅವುಗಳನ್ನು ಸುಧಾರಿಸುವ ಮಾರ್ಗಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

ಬನ್ನಿ ಮಾತನಾಡೋಣ

ನಿಮ್ಮ ಶಾಲೆ ಪ್ರತಿಭಾ ಕಾರಂಜಿ ಯಾವ ಯಾವ ಸ್ಪರ್ಧೆಗಳಲ್ಲಿ ಭಾಗವಹಿಸುವಿರಿ? ಏಕೆ?

ಆಯ್ಕೆ ಮಾಡೋಣ

ನಿನಗೆ ಇಷ್ಟವಾದುದಕ್ಕೆ ಗುರುತು (✓) ಹಾಕು.

ಬನ್ನಿ ಬರೆಯೋಣ

ನಿಮಗೆ ಇಷ್ಟವಾದವು	ನಿಮಗೆ ಇಷ್ಟವಾದವು	ನಿಮಗೆ ಇಷ್ಟವಾದವು
ಓದುವಾಡುವುದು	ಕಥೆ ಕೇಳುವುದು	ಚಿತ್ರ ಬರೆಯುವುದು

ಕಂಡುಹಿಡಿಯೋಣವೇ

ಟಿಪ್ಪಣಿಗಳನ್ನು ಬಳಸಿಕೊಂಡು ಮಕ್ಕಳ ಪ್ರತಿಭೆಯನ್ನು ಕಂಡು ಹಿಡಿದು ಬರೆಯಿರಿ.

(ನೃತ್ಯ, ಚಿತ್ರಕಲೆ, ಒಗಟುಗಳನ್ನು ಹೇಳುವುದು, ನಾಟಕ, ಕಾಗದದ ಕರಕುಶಲ, ವಸ್ತುಗಳ ತಯಾರಿಕೆ, ಹಾಡುಗಾರಿಕೆ)

ಮಧುರವಾದ ಧ್ವನಿ!
ಕೇಳಿ ಇಷ್ಟಪಡುವವರು!
ಕೇಳಿ ಸಂತೋಷಪಡುವವರು!

ಕಾಲುಗಳು ಕುಣಿಯುತ್ತದೆ!
ಕೈಗಳು ಆಡುತ್ತಿವೆ!
ಕಣ್ಣುಗಳು ಮಾತನಾಡುತ್ತಿವೆ!

ಬಣ್ಣಗಳನ್ನು ತೆಗೆದುಕೊಳ್ಳುತ್ತೇನೆ!
ಆಕಾರಗಳನ್ನು ನೀಡುತ್ತೇನೆ!
ಚಿತ್ರಗಳನ್ನು ರಚಿಸುತ್ತೇನೆ!

ಪ್ರಶ್ನೆಗಳನ್ನು ಕೇಳುತ್ತೇನೆ!
ಸೂಚನೆಗಳನ್ನು ನೀಡುತ್ತೇನೆ!

ಕಾಗದಗಳನ್ನು ತೆಗೆದುಕೊಳ್ಳುತ್ತೇನೆ!
ಮಡಚಿಸುತ್ತೇನೆ!
ಸುಂದರವಾದ ವಸ್ತುಗಳನ್ನು ತಯಾರಿಸುತ್ತೇನೆ!

ಒಗಟುಗಳನ್ನು ರಚಿಸಲು ಮಕ್ಕಳನ್ನು ಪ್ರೋತ್ಸಾಹಿಸಿ, ಅವುಗಳನ್ನು ತರಗತಿಯ ಕಲಾಶಾಲೆಯಲ್ಲಿ ಪ್ರದರ್ಶಿಸುವುದು.

ಚರ್ಚಿಸಿ ಕಲಿಯೋಣ

ಅತಿಥಿಗಳನ್ನು ಸ್ವಾಗತಿಸಲು ಸುಮತಿ ಮನೆಯನ್ನು ಸ್ವಚ್ಛಗೊಳಿಸುತ್ತಾಳೆ.

ಅವಳ ಅಣ್ಣ ಮನೆಯನ್ನು ಅಲಂಕರಿಸುತ್ತಾನೆ.

ಅಜ್ಜಿ ಅಡುಗೆಯಲ್ಲಿ ಸಹಾಯ ಮಾಡುತ್ತಾಳೆ.

ಅಜ್ಜ, ಅಂಗಡಿಯಿಂದ ತರಕಾರಿ ಮತ್ತು ಹಣ್ಣುಗಳನ್ನು ತಂದಿದ್ದಾರೆ.

ಪ್ರತಿಯೊಬ್ಬರು ತಮ್ಮ ಕೆಲಸವನ್ನು ಸಂತೋಷದಿಂದ ಮಾಡುತ್ತಾರೆ.





ಅತಿಥಿಗಳನ್ನು ಸ್ವಾಗತಿಸುವುದು, ಸತ್ಕರಿಸುವುದು ಮತ್ತು ಕೆಲಸಗಳನ್ನು ಹಂಚಿಕೊಳ್ಳುವ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ, ಕೆಲಸಗಳನ್ನು ಹಂಚಿಕೊಂಡು ಮಾಡುವುದು ಉತ್ತಮ ಗುಣವೆಂದು ಅವರಿಗೆ ತಿಳಿಸಿ ಕೊಡುವುದು.

ಪಾತ್ರೆಗಳನ್ನು ಯಾರು ತೊಳೆದರೆ ಪಳಪಳ ಎಂದು ಹೊಳೆಯುತ್ತದೆ!

ಆಯ್ಕೆ ಮಾಡೋಣ

ಅತಿಥಿಗಳ ಸ್ವಾಗತದ ಘಟನೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ.

(ವಂದನೆ ಹೇಳಿ ಬೀಳ್ಕೊಡುವುದು, ಕುಡಿಯಲು ನೀರನ್ನು ನೀಡುವುದು, ಊಟ ಬಡಿಸುವುದು, ನಮಸ್ಕರಿಸಿ ಬರಮಾಡಿಕೊಳ್ಳುವುದು.)




1. _____ 2. _____

3. _____ 4. _____

ಬನ್ನಿ ಬರೆಯೋಣ

ಯಾರು ತಯಾರಿಸಿದ್ದಾರೆ? ಎಂದು ಬರೆಯಿರಿ.

ತರಕಾರಿ ಮತ್ತು ಹಣ್ಣುಗಳನ್ನು ತಂದವರು _____

ಅಡುಗೆ ಮಾಡಿದವರು _____

ತೋರಣ ಕಟ್ಟಿದವರು _____

ಬನ್ನಿ ನಟಿಸೋಣ

ನಿಮ್ಮ ಮನೆಗೆ ಅತಿಥಿಗಳು ಬಂದಾಗ ನೀವು ಅವರನ್ನು ಹೇಗೆ ಸ್ವಾಗತಿಸುತ್ತಿರಿ ಎಂದು ಗುಂಪುಗಳಲ್ಲಿ ನಟಿಸಿ ತೋರಿಸಿ.

ಸುಮತಿಯ ಕುಟುಂಬದ ಚಿತ್ರಪಟ.



ಮಕ್ಕಳಿಗೆ ತಮ್ಮದೇ ಕುಟುಂಬದ ಚಿತ್ರಪಟವನ್ನು ಬರೆಯಲು, ತಯಾರಿಸಲು ಮಾರ್ಗದರ್ಶನ ನೀಡಿ, ಅವುಗಳನ್ನು ತರಗತಿಯ ಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಿ.

ಬನ್ನಿ ಮಾತನಾಡೋಣ

ನಾವು ಸುಮತಿ ಅವರ ಕುಟುಂಬದ ಚಿತ್ರಪಟವನ್ನು ನೋಡಿ ಅವರ ಸಂಬಂಧಗಳ ಬಗ್ಗೆ ಚರ್ಚಿಸೋಣ.

ಬನ್ನಿ ಬರೆಯೋಣ

i) ಸುಂದರ್ ಸುಮತಿಗೆ ಏನಾಗಬೇಕು? _____

ii) ಸುಮತಿಯ ತಂದೆ ಮತ್ತು ಸುಧಾಳ ಅಣ್ಣ ಇಬ್ಬರು ಒಬ್ಬರೇ, ಆದರೆ ಆ

ವ್ಯಕ್ತಿ ಸುಂದರನಿಗೆ ಏನಾಗಬೇಕು? _____

ಅ) ಚಿಕ್ಕಪ್ಪ ಆ) ಅಜ್ಜ ಇ) ಅಪ್ಪ ಈ) ಅಣ್ಣ

iii) ಸುಮತಿಯ ತಂದೆ ಅರುಣ್. ಅರುಣ್ ಅವರ ತಾಯಿ ಶಂಕರಿ

ಹಾಗಾದರೆ ಶಂಕರಿ ಸುಮತಿಗೆ ಏನಾಗಬೇಕು? _____

ಸುಮತಿಯ ಕುಟುಂಬದ ಚಿತ್ರಪಟಗಳನ್ನು ನೋಡಿ ಮತ್ತೆ ಕೆಲವು ಪ್ರಶ್ನೆಗಳನ್ನು ಅವುಗಳಿಗೆ ಉತ್ತರಗಳನ್ನು ತಯಾರಿಸುವಂತೆ ಮಕ್ಕಳಿಗೆ ಮಾರ್ಗದರ್ಶನ ಮಾಡಿ.

ಮುಗಿಲನ್ ಕುಟುಂಬ

ಚರ್ಚಿಸಿ ಕಲಿಯೋಣ

ಮುಗಿಲನ್ ಕಡಲ ತೀರದಲ್ಲಿ ಮರಳು ಮನೆಯನ್ನು ಕಟ್ಟಿ ಆಟವಾಡುತ್ತಿದ್ದನು.

ಅಪ್ಪ ಬರುವುದನ್ನು ನೋಡಿ, ಅವನು ಅವರ ಬಳಿಗೆ ಓಡಿ ಬಂದು,

ಸಂತೋಷದಿಂದ ಕುಣಿದಾಡಿದನು.

ಅವನು, "ಅಮ್ಮ, ತಾತ, ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ, ಪಾಪು ಬನ್ನಿ! ಅಪ್ಪ ಬಂದರು" ಎಂದು ಕರೆದನು.

ಅಪ್ಪ, ಮೀನು ಮಾರಿ ಸಂಪಾದಿಸಿದ ಹಣದಲ್ಲಿ ಅನೇಕ ವಸ್ತುಗಳನ್ನು ತಂದಿದ್ದರು.

ಉಳಿದ ಹಣವನ್ನು ಅಮ್ಮನಿಗೆ ನೀಡಿದರು.

"ಇದನ್ನು ಈ ತಿಂಗಳ ಉಳಿತಾಯವಾಗಿ ಇಟ್ಟುಕೊಳ್ಳಬಹುದು", ಎಂದರು ಅಮ್ಮ.

ಅಂದು ಸಂಜೆ, ಎಲ್ಲರು ಅಪ್ಪನ ಜೊತೆ ಸೇರಿ ಹಾಡುಗಳನ್ನು ಹಾಡುತ್ತಾ ಸಂತೋಷವಾಗಿ ಆಟವಾಡಿದರು.

ಹಲವಾರು ವಿಭಿನ್ನ ಭೂ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವನ ಶೈಲಿಯನ್ನು ಚರ್ಚಿಸಿ ಮತ್ತು ಅವರ ಕುಟುಂಬವಾಗಿ ಹೇಗೆ ಒಗ್ಗಟ್ಟಾಗಿ ಸಂತೋಷದಿಂದ ಇರಬಹುದು ಎಂಬುದನ್ನು ತಿಳಿಸಿ.

ಕಂಡುಹಿಡಿಯೋಣ

ಮುಗಿಲನ್ ಮನೆಯಲ್ಲಿ ಆಡಿದ ಆಟವನ್ನು ಆಡಿರಿ.

ಜಿಗಿಯುತ್ತ ಜಿಗಿಯುತ್ತ ಓಡಿ ಬಾ!
ಸೂಚನೆಗಳನ್ನು ಹೇಳುತ್ತ ಸುತ್ತಿ ಬಾ!
ಸುಳಿವಿಗೊಪ್ಪುವ ಸಂಬಂಧವನ್ನು
ಕಂಡುಹಿಡಿದು ಸೇರಿಸಲು ಬಾ!



ಇಗೋ ನಿಮಗಾಗಿ ಕೆಲವು ಸೂಚನೆಗಳು:

1. ನಿಮ್ಮ ತಂದೆ ತಾಯಿಯ ಹಿರಿಯ ಮಗ ನಿಮಗೆ ಏನಾಗಬೇಕು? _____

2. ತಂದೆಯ ತಂಗಿ ನಿಮಗೆ ಏನಾಗಬೇಕು? _____

3. ತಂದೆಯ ತಾಯಿ ನಿಮಗೆ ಏನಾಗಬೇಕು? _____

4. _____

5. _____

ಮಕ್ಕಳಿಗೆ ಮೇಲೆ ಕೊಟ್ಟಿರುವ ಸೂಚನೆಗಳಂತೆ ಇನ್ನು ಹಲವು ಸೂಚನೆಗಳನ್ನು ನೀಡಿ ಆಟದಲ್ಲಿ ಭಾಗವಹಿಸುವಂತೆ ಮಾಡುವುದು.

ಬನ್ನಿ ಮಾತನಾಡೋಣ

ನಿಮ್ಮ ಸಂಬಂಧಿಕರ ಜೊತೆ ಆಡಿದ ಆಟದ ಅನುಭವಗಳನ್ನು ಹೇಳಿ.

ಬನ್ನಿ ಬರೆಯೋಣ

ನಿಮ್ಮ ಸಂಬಂಧಿಕರನ್ನು ನೀವು ಹೇಗೆ ಕರೆಯುತ್ತೀರಿ ಎಂದು ಬರೆಯಿರಿ.

ಅಜ್ಜಿ – ಅವ್ವ, _____

ಅಜ್ಜ – _____

ಚಿಕ್ಕಪ್ಪ – _____

ಮಾವ – _____

ಅತ್ತೆ – _____

ಚಿಕ್ಕಮ್ಮ – _____

ಬಾನುವಿನ ಕುಟುಂಬ

ಚರ್ಚಿಸಿ ಕಲಿಯೋಣ

ನಮ್ಮ ಮನೆಯಲ್ಲಿ ನಾನು, ಅಮ್ಮ, ಚಿಟ್ಟು, ಕಿಟ್ಟು ಮತ್ತು ಮಿಟ್ಟು ಮುಂತಾದವರು.

ಚಿಟ್ಟು ನಮ್ಮ ಮುದ್ದಿನ ನಾಯಿ ಮರಿ. ಕಿಟ್ಟು ಮತ್ತು ಮಿಟ್ಟು ನಮ್ಮ ಬೆಕ್ಕಿನ ಮರಿಗಳು.



ನನ್ನ ಅಮ್ಮ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕರು.

ಅಮ್ಮನ ಜೊತೆ ಶಾಲೆಗೆ ಹೋಗುತ್ತೇನೆ.



ಅಮ್ಮ ಮನೆಗೆ ಬರುವವರಿಗೆ ನಾನು ನನ್ನ ಮುದ್ದಿನ ಪ್ರಾಣಿಗಳ ಜೊತೆ ಆಟವಾಡುತ್ತೇನೆ.

ನಾನು ಮತ್ತು ಅಮ್ಮ ರಜಾ ದಿನಗಳಲ್ಲಿ ಗ್ರಂಥಾಲಯಕ್ಕೆ ಹೋಗುತ್ತೇವೆ.

ನಮ್ಮ ಇಷ್ಟಗಳನ್ನು ಅಮ್ಮ ಅರ್ಥಮಾಡಿಕೊಳ್ಳುತ್ತಾರೆ. ರಜೆಯಲ್ಲಿ ನಾವೆಲ್ಲರೂ ಉದ್ಯಾನವನಕ್ಕೆ ಹೋಗುತ್ತೇವೆ ನಮಗೆಲ್ಲರಿಗೂ ಅಮ್ಮನೇ ಸರ್ವಸ್ವ.

ಮಕ್ಕಳು ತಮ್ಮ ಕುಟುಂಬದ ಸದಸ್ಯರೊಂದಿಗೆ ಸಂತೋಷದಿಂದ ಕಳೆದ ಕ್ಷಣಗಳ ಬಗ್ಗೆ ಚರ್ಚಿಸಲಿ.

ಬನ್ನಿ ಮಾತನಾಡೋಣ

ನಿಮ್ಮ ಮನೆಯಲ್ಲಿ ಸಾಕುತ್ತಿರುವ ಅಥವಾ ಸಾಕಲು ಇಷ್ಟಪಡುವ ಸಾಕು ಪ್ರಾಣಿಗಳು ಯಾವುವು?
ನಿಮ್ಮ ಸಂಬಂಧಿಕರೊಂದಿಗೆ ನೀವು ಇಷ್ಟಪಡುವ, ಹೋದ ಸ್ಥಳಗಳು ಯಾವುವು?

ಬನ್ನಿ ಬರೆಯೋಣ

ನಮ್ಮ ಅಮ್ಮ ತುಂಬಾ ಮಧುರವಾದವಳು!
ನನಗೆ ಇಷ್ಟವಾದ ಒಳ್ಳೆಯವಳು!
ಸಾಕುಪ್ರಾಣಿಗಳನ್ನು ಸಾಕುವಳು!
ನಮ್ಮ ಇಷ್ಟವನ್ನು ತಿಳಿದವಳು!
ಪ್ರೀತಿಯಿಂದ ನೋಡಿಕೊಳ್ಳುವಳು!

ನಮ್ಮ _____

_____

_____

_____

ನಿಮಗೆ ಇಷ್ಟವಾದ ಕುಟುಂಬದ ಸದಸ್ಯರ ಬಗ್ಗೆ ಬರೆಯಲು ಇಲ್ಲಿ ಜಾಗ ನೀಡಲಾಗಿದೆ.

ಬನ್ನಿ ಚಿತ್ರಬಿಡಿಸೋಣ

ನಿನಗೆ ಇಷ್ಟವಾದ ಸಾಕುಪ್ರಾಣಿಯ ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚಿ ಹೆಸರಿಸಿ.

ಕಲಿಕಾ ಪಯಣ

1. ಮುಗಿಲನ ಕುಟುಂಬದ ಚಿತ್ರ ಪಟವನ್ನು ಗಮನಿಸಿ ಉತ್ತರಿಸಿ.



(ಚಿಕ್ಕಮ್ಮ, ಮಗಳು, ದೊಡ್ಡಮ್ಮ, ಚಿಕ್ಕಪ್ಪ, ಅಜ್ಜ,)

1. ಸೆಲ್ವಂವರಿಗೆ ಮೀನಾ ಯಾವ ಸಂಬಂಧ? _____.

2. ಜಯ ಅಜ್ಜಿಯ ಪತಿ ಮುಖಿಲನಿಗೆ ಯಾವ ಸಂಬಂಧ? _____.

3. ಮೀನಾ ಕವಿತಾ ಅವರನ್ನು ಹೇಗೆ ಕರೆಯುತ್ತಾರೆ? _____.

4. ಮುಗಿಲನಿಗೆ ಮಾಲಾ ಯಾವ ಸಂಬಂಧ? _____.

5. ಮುಗಿಲನು ಸೆಲ್ವಂ ಅವರನ್ನು ಏನೆಂದು ಕರೆಯುತ್ತಾನೆ? _____.

2. ಮೌಖಿಕ ಪ್ರಶ್ನೆ

ಕುಟುಂಬದ ಹಬ್ಬದಲ್ಲಿ ಭೇಟಿಯಾದ ಸಂಬಂಧಿಕರ ಬಗ್ಗೆ ತರಗತಿಯಲ್ಲಿ ಹಂಚಿಕೊಳ್ಳಿ.

3. ಕಾರ್ಯ ಯೋಜನೆ

ದಿನಪತ್ರಿಕೆಗಳನ್ನು ಬಳಸಿ ಫೋಟೋ ಫ್ರೇಮ್ ತಯಾರಿಸಿ, ಅದರಲ್ಲಿ ಕುಟುಂಬದ ಫೋಟೋ ಹಚ್ಚಿ ತರಗತಿಯಲ್ಲಿ ಪ್ರದರ್ಶಿಸಿ.

ನಾನು ಕಲಿತದ್ದು

ನಾನು ತಿಳಿದುಕೊಂಡಿರುವುದಕ್ಕೆ ★ ಬಣ್ಣ ಹಚ್ಚುವೆನು.

1. ನನ್ನ ಕುಟುಂಬದ ಸಂಬಂಧಗಳನ್ನು ಅರ್ಥ ಮಾಡಿಕೊಂಡು ಸಂಬಂಧಗಳ ಹೆಸರನ್ನು ಹೇಳಬಲ್ಲೆ.

2. ನನ್ನ ಸಾಮರ್ಥ್ಯವನ್ನು ಅರಿತು ಅದನ್ನು ವ್ಯಕ್ತಪಡಿಸಬಲ್ಲೆ.

ನನ್ನ ತರಗತಿ

ಚರ್ಚಿಸಿ ಕಲಿಯಿರಿ

ಶಿಕ್ಷಕರು, ತರಗತಿ ಒಳಗೆ ಪ್ರವೇಶಿಸಿದರು. ವಿದ್ಯಾರ್ಥಿಗಳು ವಂದನೆ ಸಲ್ಲಿಸಿದರು. ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ಮುಖ್ಯೋಪಾಧ್ಯಾಯರು ಉತ್ತಮ ತರಗತಿಗೆ ಬಹುಮಾನ ನೀಡುವುದಾಗಿ ಘೋಷಿಸಿದರು.

ಬಹುಮಾನ ಪಡೆಯಲು ನಾವು ಏನು ಮಾಡಬೇಕು?

ಪ್ರತಿಯೊಬ್ಬರು ಒಂದೊಂದು ವಿಷಯವನ್ನು ಹೇಳಿದರು ಪಟ್ಟಿ ಬೆಳೆಯುತ್ತಾ ಹೋಯಿತು. ತರಗತಿಯಲ್ಲಿ ಮಾಡಬೇಕಾದವು ಮತ್ತು ಮಾಡಬಾರದವು ಎಂದು ಶಿಕ್ಷಕರು ವಿಂಗಡಿಸಿ ಬರೆದರು.



ತರಗತಿಯಲ್ಲಿ

ಮಾಡಬೇಕಾದವು	ಮಾಡಬಾರದವು
ತರಗತಿಗೆ ಸರಿಯಾದ ಸಮಯಕ್ಕೆ ಬರುವುದು.	ಎಲ್ಲಿಯೂ ಕಸ ಹಾಕಬಾರದು.
ಇತರರು ಮಾತನಾಡುವಾಗ ಗಮನವಿಟ್ಟು ಕೇಳುವುದು.	ಬೆಂಚ್ ಅಥವಾ ಡೆಸ್ಕ್ ಮೇಲೆ ಗೀಚಬಾರದು.
ತರಗತಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು.	ಸ್ನೇಹಿತರನ್ನು ತಳ್ಳಬಾರದು.
ಒಗ್ಗಟ್ಟಿನಿಂದ ಇರುವುದು.	ಜಗಳವಾಡಬಾರದು.

"ತರಗತಿಯ ನಿಯಮಗಳನ್ನು ಪಾಲಿಸುವುದರ ಜೊತೆಗೆ ಬಿಡುವಿನ ಸಮಯದಲ್ಲಿ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರೆ ಖಂಡಿತವಾಗಿ ಬಹುಮಾನ ಗೆಲ್ಲಬಹುದು" ಎಂದು ಶಿಕ್ಷಕರು ಹೇಳಿದರು. ಮಕ್ಕಳು ಒಂದೊಂದಾಗಿ ತಮ್ಮ ಆಸಕ್ತಿಗಳನ್ನು ಹೇಳಲು ಪ್ರಾರಂಭಿಸಿದರು.



ಮಕ್ಕಳು ತಮ್ಮ ತರಗತಿಗೆ ಸೂಕ್ತವಾದ ನಿಯಮಗಳನ್ನು ರೂಪಿಸಲು ಪ್ರೋತ್ಸಾಹಿಸಿ.

ಆಸಕ್ತಿಯ ಸಮಯ

ಕಥೆ ಓದುವವರು– ಪುಸ್ತಕಗಳನ್ನು ಪರಸ್ಪರ ಬದಲಾಯಿಸಿಕೊಂಡರು.



ಚಿತ್ರ ಬಿಡಿಸುವರು– ಬಣ್ಣಗಳನ್ನು ಪರಸ್ಪರ ಹಂಚಿಕೊಂಡರು.

ಮಕ್ಕಳು– ಅತ್ತಿತ್ತ ಓಡಾಡಿದರು ಆದರೂ ತರಗತಿ ಶಾಂತವಾಗಿತ್ತು.

ಶಿಕ್ಷಕರು ಸಂತಸ ಪಟ್ಟರು. ಹೊಸ ಪ್ರಯತ್ನ ಯಶಸ್ವಿಯಾಯಿತು.

ಇನ್ನು ಮುಂದೆ ವಾರದಲ್ಲಿ ಒಂದು ಗಂಟೆ ಮಕ್ಕಳು ಆಸಕ್ತಿ ಸಮಯ!

ನಿಮಗೆ ತಿಳಿದಿದೆಯೇ?

ಪ್ರತಿಭಾಕಾರಂಜಿ ಸ್ಪರ್ಧೆಗಳಲ್ಲಿ ರಾಜ್ಯಮಟ್ಟದಲ್ಲಿ ಜಯಗಳಿಸಿದರೆ ಕಲ್ಯೆಯರಸನ್, ಅಥವಾ ಕಲ್ಯೆರಸಿ ಎಂಬ ಬಿರುದನ್ನು ಪಡೆಯಬಹುದು.

ಬನ್ನಿ ಮಾತನಾಡೋಣ

ನಿಮ್ಮ ಆಸಕ್ತಿಯ ಸಮಯದಲ್ಲಿ ನೀವು ಏನು ಮಾಡುತ್ತೀರಿ?

ಬಾಬು, ಹಾಡು ಹಾಡಿದನು.

ಪಲ್ಲವಿ, ಹಳಗುಳಿ ಮನೆ ಆಡಿದಳು.

ಮದನ್, ಕ್ರಿಕೆಟ್ ಆಡಿದನು.

ಚಿತ್ರ, ಚಿತ್ರ ಬಿಡಿಸಿದಳು.

ನಾನು, _____

_____

_____

_____

_____

ಮಕ್ಕಳು ತನ್ನ ಗೆಳೆಯರೊಡನೆ ಇಷ್ಟವಾದ ಸಮಯದಲ್ಲಿ ಮಾಡುವ ಚಟುವಟಿಕೆಗಳನ್ನು ಬರೆದು ಪ್ರೋತ್ಸಾಹಿಸಬೇಕು.

ಆಯ್ಕೆ ಮಾಡೋಣ

ತರಗತಿಯ ಕೊಠಡಿಯ ಘಟನೆಗಳನ್ನು ಗಮನಿಸಿ ಸರಿಯಾದ ಕ್ರಿಯೆಗೆ (✓) ಗುರುತು ಹಾಕಿ.

ಯೋಚಿಸಿ ಬರೆಯೋಣ

ಓದಿ ವಾಕ್ಯಗಳನ್ನು: ಉತ್ತರವನ್ನು ಆರಿಸಿ!

- ಡೇವಿಡ್ ಪ್ರತಿದಿನ ಚಿತ್ರ ಬಿಡಿಸಲು ಇಷ್ಟಪಡುತ್ತಾನೆ.
- ಕಲಾ ಪ್ರತಿ ದಿನ ಓಡಲು ತರಬೇತಿ ಪಡೆಯುತ್ತಾಳೆ.

1. ಡೇವಿಡ್ ಬೆಳೆಸಿಕೊಳ್ಳಲು ಬಯಸುವ ಕೌಶಲ್ಯ ಯಾವುದು?

ಅ) ಕ್ರೀಡೆ
ಆ) ಚಿತ್ರಕಲೆ
ಇ) ಓದುವುದು
ಈ) ಕರಕುಶಲ ವಸ್ತುಗಳ ತಯಾರಿಕೆ

2. ಕಲಾ ಯಾವ ಸ್ಪರ್ಧೆಯಲ್ಲಿ ಗೆಲ್ಲಲು ತರಬೇತಿ ಪಡೆಯುತ್ತಾಳೆ?

ಅ) ಓಟದ ಸ್ಪರ್ಧೆ
ಆ) ಹಾಡಿನ ಸ್ಪರ್ಧೆ
ಇ) ಪ್ರಬಂಧ ಸ್ಪರ್ಧೆ
ಈ) ಚಿತ್ರಕಲೆ ಸ್ಪರ್ಧೆ

ಕಲಿಕಾ ಪಯಣ

1. ಒಗಟುಗಳನ್ನು ಕಂಡುಹಿಡಿದು ಸರಿಯಾದ ಪದಗಳನ್ನು ಚೌಕಟ್ಟಿನಲ್ಲಿ ತುಂಬಿರಿ.

(ನಾಟಕ, ಹಾಡು, ನೃತ್ಯ, ಕಲೆ, ರಚನೆ)

ಮೇಲಿಂದ ಕೆಳಕ್ಕೆ

1. ಪಾತ್ರವಾಗಿ ನಟಿಸುವುದು.

2. ಚಿತ್ರಗಳನ್ನು ಬಿಡಿಸುವುದು.

3. ಹೊಸದನ್ನು ನಿರ್ಮಿಸುವುದು.

ಎಡದಿಂದ ಬಲಕ್ಕೆ

4. ಸಂಗೀತಕ್ಕೆ ತಕ್ಕಂತೆ ದೇಹವನ್ನು ಚಲಿಸಿ ಆಡುವುದು.

5. ಮಧುರವಾದ ಧ್ವನಿಯಲ್ಲಿ ಹಾಡುವುದು.



2. ಮೌಖಿಕ ಪ್ರಶ್ನೆ

ನೀವು ಮನೆಯಲ್ಲಿ ಇಷ್ಟಪಟ್ಟು ಮಾಡುವ ಕೆಲಸಗಳನ್ನು ಹಂಚಿಕೊಳ್ಳಿ.

3. ಕಾರ್ಯ ಯೋಜನೆ

ನಿಮ್ಮ ಸ್ನೇಹಿತರೊಂದಿಗೆ ಸೇರಿ, ತರಗತಿ ನಿಯಮಗಳನ್ನು ಮಿಂಚುಪಟ್ಟಿಗಳಲ್ಲಿ ಬರೆದು, ತರಗತಿಯಲ್ಲಿ ಪ್ರದರ್ಶಿಸಿ.

ಮಕ್ಕಳು ಚಿಕ್ಕ ಕಾರ್ಡುಗಳಲ್ಲಿ ತಮ್ಮ ತರಗತಿ ನಿಯಮಗಳನ್ನು ಬರೆದು ಮತ್ತು ಅದನ್ನು ಚರ್ಚಿಸಬೇಕು.

ನಾನು ಕಲಿತದ್ದು

ನಾನು ತಿಳಿದುಕೊಂಡ ವಿಷಯಕ್ಕೆ ಬಣ್ಣ ಹಚ್ಚುವೆನು.

1. ಇತರರೊಂದಿಗೆ ಹಂಚಿಕೊಂಡು ಮಾಡುವ ಕೆಲಸಗಳಲ್ಲಿ ಸಂತೋಷದಿಂದ ಪಾಲ್ಗೊಳ್ಳುವೆ.

2. ತರಗತಿಯ ನಿಯಮಗಳನ್ನು ತಿಳಿದು ಅವುಗಳನ್ನು ಪಾಲಿಸುವೆ.

ನಾನೇ ಮಾಡುತ್ತೇನೆ

1. ನಿಲಾವಿನ ಕುಟುಂಬದ ಚಿತ್ರಪಟವನ್ನು ಗಮನದಿಂದ ನೋಡಿ ಉತ್ತರಿಸಿ.



1) ನೀಲಾಳ ಕುಟುಂಬದ ಸದಸ್ಯರ ಸಂಖ್ಯೆ _____.

2) ಇನಿಯಾಳ ಸೋದರ ಮಾವನ ಮಗಳು _____.

3) ಅನ್ಬು ಕುಮರೇಶನ್ ಅವರಿಗೆ ಏನಾಗಬೇಕು _____.

4) ಕುಯಿಲಿ ವಿಕ್ರಂ ಅವರಿಗೆ ಏನಾಗಬೇಕು _____.

5) ನೀಲಾಳ ಅತ್ತೆಯ ಜೊತೆ ಹುಟ್ಟಿದ ಸಹೋದರ ಇನಿಯಾಳಿಗೆ ಏನಾಗಬೇಕು _____.

2. ಮೌಖಿಕ ಪ್ರಶ್ನೆ

ನಿಮ್ಮ ಮನೆಯಲ್ಲಿ ಎಲ್ಲರೂ ಹಂಚಿಕೊಂಡು ಮಾಡುವ ಕೆಲಸಗಳು ಯಾವುವು? ನೀವು ಅವರಿಗೆ ಹೇಗೆ ಸಹಾಯ ಮಾಡುತ್ತೀರಿ? ಎಂಬ ಬಗ್ಗೆ ಚರ್ಚಿಸಿ.

3. ಕಾರ್ಯ ಯೋಜನೆ

1. ನಿಮ್ಮ ಕುಟುಂಬದ ಸದಸ್ಯರ ಚಿತ್ರಗಳನ್ನು ಬೆರಳು ಗೊಂಬೆಗಳನ್ನಾಗಿ ಮಾಡಿ. ಅವುಗಳ ಮೇಲೆ ಅವರ ಹೆಸರುಗಳನ್ನು ಬರೆದು, ತರಗತಿಯ ಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಿ.

2. ನಿಮ್ಮ ತರಗತಿಯನ್ನು ಅಲಂಕರಿಸಲು ಬೇಕಾದ ವಸ್ತುಗಳನ್ನು (ಚಿತ್ರಗಳು ಅಥವಾ ಕರಕುಶಲ ವಸ್ತುಗಳು) ತಯಾರಿಸಿಕೊಂಡು ಬನ್ನಿ.

ಘಟಕ
2

ಸುಮತಿಯ ಊರಿನಲ್ಲಿ

ಚರ್ಚಿಸಿ ಕಲಿಯಿರಿ





ನಾಳೆ ವೈದ್ಯಕೀಯ ಶಿಬಿರಕ್ಕೆ ಹೋಗೋಣ, ಅತ್ತೆ.

ಅಮ್ಮ, ನಾನು ಬರುತ್ತೇನೆ.

ಒಳ್ಳೆಯದು ಸುಮತಿ. ನೀನು ಹೋದರೆ ಶಿಬಿರದ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು.

ನಾವು ಅಲ್ಲಿಗೆ ಹೇಗೆ ಹೋಗುತ್ತೇವೆ ಅಪ್ಪಾ

ಅಮ್ಮನಿಗೆ ದಾರಿ ಗೊತ್ತಿದೆಯಲ್ಲ!



ಆದರೂ ನಾನೇ ದಾರಿ ಹುಡುಕಬೇಕು, ಅಪ್ಪ.

ದಾರಿಯ ನಕ್ಷೆಯನ್ನು ಬರೆದು ಕೊಡುತ್ತೇನೆ. ಅದನ್ನು ಅನುಸರಿಸಿ ಹೋಗು!

ನಿಮ್ಮ ಊರು ಮತ್ತು ಶಾಲೆಯಲ್ಲಿ ನಡೆಯುವ ವೈದ್ಯಕೀಯ ಶಿಬಿರದಲ್ಲಿ, ಮಕ್ಕಳಿಗೆ ಲಸಿಕೆ ಹಾಕುವುದು, ಪೌಷ್ಟಿಕಾಂಶದ ಮಾತ್ರೆಗಳನ್ನು ನೀಡುವುದು ಮತ್ತು ಕಣ್ಣಿನ ತಪಾಸಣೆ ಮಾಡುವ ಬಗ್ಗೆ ಚರ್ಚಿಸಿ.

ಕಂಡುಹಿಡಿಯೋಣ

ಸುಮತಿ ಮನೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗುವ ದಾರಿಯಲ್ಲಿ ಸಿಗುವ ಸ್ಥಳಗಳನ್ನು ಗುರುತು ಮಾಡಿ.

1. ಸುಮತಿಯ ಮನೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗುವ ದಾರಿಯನ್ನು ನಕ್ಷೆಯಲ್ಲಿ ಬಿಡಿಸಿ ತೋರಿಸಿ.
2. ಬಾನುವಿನ ಮನೆಯಿಂದ ನ್ಯಾಯಬೆಲೆ ಅಂಗಡಿಗೆ ಯಾವ ಕಟ್ಟಡದ ಮೂಲಕ ಹೋದರೆ ಬೇಗ ತಲುಪಬಹುದು? _____
3. ಶಾಲೆಯ ಬಲಬದಿಯಲ್ಲಿರುವ ಕಟ್ಟಡ ಯಾವುದು? _____
4. ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿರುವ ಸ್ಥಳ ಯಾವುದು? _____
5. ಬಾನುವಿನ ಮನೆಯ ಹತ್ತಿರವಿರುವ ಕಟ್ಟಡ ಯಾವುದು? _____
6. ಸುಮತಿಯ ಮನೆಯಿಂದ ದೂರದಲ್ಲಿರುವ ಕಟ್ಟಡ ಯಾವುದು? _____
7. ಸುಮತಿ ಮನೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗುವ ದಾರಿಯಲ್ಲಿ ಸಿಗುವ ಸ್ಥಳಗಳಿಗೆ (✓) ಗುರುತು ಹಾಕಿ.



ನಕ್ಷೆಯನ್ನು ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಮಾರ್ಗದರ್ಶನ ನೀಡಿ.

ಬನ್ನಿ ಬರೆಯೋಣ

1. ಕರಪತ್ರವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ನಡೆಸುವ

ವಿಶೇಷ ವೈದ್ಯಕೀಯ ಶಿಬಿರ

ದಿನಾಂಕ 15-07-2026
ಸಮಯ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ರವರೆಗೆ
ಸ್ಥಳ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಕಡಲೂರು

ಚಿಕಿತ್ಸೆ ನೀಡಲಾಗುವ ಕಾಯಿಲೆಗಳು ಮತ್ತು ಪರೀಕ್ಷೆಗಳು

- ಸಾಮಾನ್ಯ ವೈದ್ಯಕೀಯ ಚಿಕಿತ್ಸೆ
- ಕಣ್ಣಿನ ಪರೀಕ್ಷೆ
- ಹಲ್ಲಿನ ಪರೀಕ್ಷೆ

ಜಿಲ್ಲಾಧಿಕಾರಿ

ಜಿಲ್ಲಾ ಆರೋಗ್ಯ ಕೇಂದ್ರ ಇಲಾಖೆ

1. ವಿಶೇಷ ವೈದ್ಯಕೀಯ ಶಿಬಿರ ನಡೆಯುವ ದಿನಾಂಕ _____
2. ವಿಶೇಷ ವೈದ್ಯಕೀಯ ಶಿಬಿರ ನಡೆಯುವ ಸಮಯ _____
3. ವಿಶೇಷ ವೈದ್ಯಕೀಯ ಶಿಬಿರ ನಡೆಯುವ ಸ್ಥಳ ಯಾವುದು?_____
4. ವೈದ್ಯಕೀಯ ಶಿಬಿರವನ್ನು ಆಯೋಜಿಸುವ ಇಲಾಖೆಯ ಹೆಸರನ್ನು ಬರೆಯಿರಿ.

_____

5. ಶಿಬಿರದಲ್ಲಿ ಮಾಡಲಾಗುವ ತಪಾಸಣೆಗಳನ್ನು ಬರೆಯಿರಿ.

_____

_____

_____

2. ಸೂಚನಾ ಪತ್ರವನ್ನು ಭರ್ತಿ ಮಾಡಿ.

ತಮಿಳುನಾಡು ಪರಿಸರ ಮತ್ತು
ಹವಾಮಾನ ಬದಲಾವಣೆ ಇಲಾಖೆ
ನಡೆಸುವ

ಪರಿಸರ ಜಾಗೃತಿ ಶಿಬಿರ

ದಿನಾಂಕ: .....

ಸಮಯ: .....

ಸ್ಥಳ: .....

ವಿಶೇಷ ಅಂಶಗಳು:

.....

.....

.....

.....

ಇಂದಿನ ಬೀಜ...
ನಾಳೆಯ ಅರಣ್ಯ!

ಕರಪತ್ರವನ್ನು ಸಿದ್ಧಪಡಿಸಲು ಮಕ್ಕಳಿಗೆ ಮಾರ್ಗದರ್ಶನ ನೀಡಿ.

ಘಟಕ 2

ಸುಮತಿಯ ಊರಿನಲ್ಲಿ...

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ...

ಚರ್ಚಿಸಿ ಕಲಿಯಿರಿ



ಅಮ್ಮ ಅಜ್ಜಿ ಮತ್ತು ಸುಮತಿ ಮೂವರು ಪ್ರಾಥಮಿಕ ಆರೋಗ್ಯ ಕೇಂದ್ರದ ವಿಶೇಷ ವೈದ್ಯಕೀಯ ಶಿಬಿರದಲ್ಲಿದ್ದಾರೆ.



ಶಿಬಿರದಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳುತ್ತಿದ್ದಾರೆ.
ಸರದಿಯ ಚೀಟಿಯನ್ನು ಪಡೆದುಕೊಳ್ಳುತ್ತಿದ್ದಾರೆ.
ಕಣ್ಣಿನ ತಪಾಸಣಾ ವಿಭಾಗಕ್ಕೆ ಹೋಗುತ್ತಿದ್ದಾರೆ.



ಅಜ್ಜಿಯ ಸರದಿ ಬಂದಿತು.
ಕಣ್ಣಿನ ವೈದ್ಯರು, ಅಜ್ಜಿಯನ್ನು
ಪರೀಕ್ಷಿಸುತ್ತಿದ್ದಾರೆ. ಕನ್ನಡಕ ಧರಿಸಲು
ಶಿಫಾರಸು ಮಾಡುತ್ತಿದ್ದಾರೆ.



ಕಣ್ಣಿನ ಹನಿ ಔಷಧಿಯನ್ನು
ಪಡೆದುಕೊಂಡು ಮನೆಗೆ ಮರಳಿದರು.

ಮಕ್ಕಳೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕೆಲಸಗಳ ಬಗ್ಗೆ ಚರ್ಚಿಸಿ.

ಆಯ್ಕೆ ಮಾಡೋಣ

ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆಸ್ಪತ್ರೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ (✓) ಗುರುತು ಹಾಕಿರಿ.




ಬನ್ನಿ ಬರೆಯೋಣ

ಈ ಕೆಳಗಿನ ಕೆಲಸಗಳಿಗೆ ಸಂಬಂಧಿಸಿದ ಸಿಬ್ಬಂದಿಗಳ ಹೆಸರನ್ನು ಆರಿಸಿ ಬರೆಯಿರಿ.

(ತುರ್ತುಚಿಕಿತ್ಸ ವಾಹನ ಚಾಲಕ, ಔಷದ ತಜ್ಞ, ವೈದ್ಯ, ದಾದಿ)

1. ಪರೀಕ್ಷೆ ಮಾಡುವವರು – _____

2. ರೋಗಿಗಳಿಗೆ ಸಹಾಯ ಮಾಡುವವರು – _____

3. ಔಷಧಿಗಳನ್ನು ನೀಡುವವರು – _____

4. ಜೀವ ಉಳಿಸುವ ವಾಹನವನ್ನು ಚಲಾಯಿಸುವವರು – _____

ಗ್ರಂಥಾಲಯದಲ್ಲಿ...

ಚರ್ಚಿಸಿ ಕಲಿಯಿರಿ

ಅಜ್ಜಿ ಹೊಸ ಕನ್ನಡಕವನ್ನು ಹಾಕಿಕೊಂಡು ಸುಮತಿಯ ಜೊತೆ ಗ್ರಂಥಾಲಯಕ್ಕೆ ಹೋಗುತ್ತಿದ್ದಾರೆ.





ಅಜ್ಜಿ, ಗ್ರಂಥಪಾಲಕರಲ್ಲಿ ಅರ್ಜಿಯನ್ನು ಕೇಳುತ್ತಿದ್ದಾರೆ.

ಸುಮತಿಯ ಅರ್ಜಿ ನಮೂನೆಯನ್ನು ತುಂಬಲು, ಅಜ್ಜಿ ಸಹಾಯ ಮಾಡುತ್ತಿದ್ದಾರೆ.



ಅಜ್ಜಿ ಮತ್ತು ಸುಮತಿ ಚಿತ್ರಕಥೆಯನ್ನು ಓದುತ್ತಿದ್ದಾರೆ.

ಗ್ರಂಥಾಲಯಕ್ಕೆ ಹೋಗುವುದು ಒಳ್ಳೆಯ ಅಭ್ಯಾಸ, ಗ್ರಂಥಾಲಯದಲ್ಲಿ ಪಾಲಿಸಬೇಕಾದ ನಿಯಮಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ.

ನಿಮಗೆ ಗೊತ್ತಾ

ಏಷ್ಯಾದ ಎರಡನೇ ಅತಿ ದೊಡ್ಡ ಗ್ರಂಥಾಲಯವು, ಚೆನ್ನೈನಲ್ಲಿರುವ ಅಣ್ಣ ಶತಮಾನೋತ್ಸವ ಗ್ರಂಥಾಲಯವಾಗಿದೆ.

ಓದೋಣ! ಹಂಚಿಕೊಳ್ಳೋಣ!

ಸುಮತಿ, ತಾನು ಗ್ರಂಥಾಲಯದಲ್ಲಿ ಓದಿ ಮೆಚ್ಚಿದ ಕಥಾ ಪುಸ್ತಕದ ಹೆಸರು, ಲೇಖಕರ ಹೆಸರು, ಮತ್ತು ತನಗೆ ಇಷ್ಟವಾದ ಪಾತ್ರದ ಬಗ್ಗೆ ತನ್ನ ತಾಯಿಯೊಂದಿಗೆ ಹಂಚಿಕೊಂಡಳು.

ನೀವು ಓದಿದ ಪುಸ್ತಕದ ಬಗ್ಗೆ ಹಂಚಿಕೊಳ್ಳಿ!

ಪುಸ್ತಕದ ಹೆಸರು _____

ಲೇಖಕರ ಹೆಸರು _____

ಕಥೆಯಲ್ಲಿ ನನಗೆ ಇಷ್ಟವಾದ ಪಾತ್ರ _____

ಹಾಡೋಣ! ಬರಿಯೋಣ!

ಗ್ರಂಥಾಲಯಕ್ಕೆ ಹೋಗೋಣ

ಕಥೆಗಳನ್ನು ಓದೋಣ

ಗ್ರಂಥಾಲಯಕ್ಕೆ ಹೋಗೋಣ

ಚಿತ್ರಗಳನ್ನು _____

ಗ್ರಂಥಾಲಯಕ್ಕೆ ಹೋಗೋಣ

ಮೌನವಾಗಿ _____

ಗ್ರಂಥಾಲಯಕ್ಕೆ ಹೋಗೋಣ

_____ ಬೆಳೆಸೋಣ!

ಬನ್ನಿ ಬರಿಯೋಣ

ಗ್ರಂಥಾಲಯದಲ್ಲಿ ಕಂಡು ಬರುವ ಸೂಚನಾ ಫಲಕಗಳನ್ನು ಬರೆಯಿರಿ.

ಪುಸ್ತಕ ತೆಗೆದುಕೊಂಡ ಜಾಗದಲ್ಲಿ ಇರಿಸಿ.	

ಕಲಿಕಾ ಪಯಣ

1. ಕೋಷ್ಟಕವು ಗ್ರಂಥಾಲಯಕ್ಕೆ ಭೇಟಿ ನೀಡಿದವರ ಸಂಖ್ಯೆಗಳನ್ನು ದಿನಗಳ .ಪ್ರಕಾರ ತೋರಿಸುತ್ತದೆ.

ವಾರಗಳು	ಗ್ರಂಥಾಲಯಕ್ಕೆ ಭೇಟಿ ನೀಡಿದವರು
ಭಾನುವಾರ	
ಸೋಮವಾರ	
ಮಂಗಳವಾರ	
ಬುಧವಾರ	
ಗುರುವಾರ	

i) ಗ್ರಂಥಾಲಯಕ್ಕೆ ಅತಿ ಹೆಚ್ಚು ಜನರು ಭೇಟಿ ನೀಡಿದ ದಿನ ಯಾವುದು?_____

ii) ಬುಧವಾರ ಎಷ್ಟು ಜನರು ಭೇಟಿ ನೀಡಿದ್ದಾರೆ?_____

iii) ಯಾವ ದಿನಗಳಲ್ಲಿ ಸಮಾನ ಸಂಖ್ಯೆಯ ಜನರು ಗ್ರಂಥಾಲಯಕ್ಕೆ ಭೇಟಿ ನೀಡಿದ್ದಾರೆ?_____

_____

2. ಮೌಖಿಕ ಪ್ರಶ್ನೆ

ನಮಗೆ ಆರೋಗ್ಯ ಸರಿಯಿಲ್ಲದಿದ್ದರೆ ನಾವು ಏನು ಮಾಡಬೇಕು?

3. ಕಾರ್ಯ ಯೋಜನೆ

ಚಿತ್ರದಲ್ಲಿ ಇರುವುದನ್ನು ರೇಖಾ ಚಿತ್ರಗಳನ್ನಾಗಿ ಬರೆದು, ಅದನ್ನು ತರಗತಿಯ ಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಿ.

ಕಂಡುಹಿಡಿಯೋಣ

ನಕ್ಷೆಯನ್ನು ನೋಡಿ, ಪ್ರಶ್ನೆಗಳಿಗೆ ಉತ್ತರಿಸಿ.

1. ಬಾನು ಶಾಲೆಗೆ ಹೋಗುವ ದಾರಿಯನ್ನು ನಕ್ಷೆಯಲ್ಲಿ ಬರೆದು ತೋರಿಸಿ.

2. ಅಂಚೆ ಕಛೇರಿ ಯನ್ನು ವೃತ್ತಾಕಾರದಲ್ಲಿ ಗುರುತಿಸಿ.

3. ವಾಣಿಜ್ಯ ಸಂಕೀರ್ಣದ ಬಲಬದಿಯಲ್ಲಿರುವ ಕಟ್ಟಡ ಯಾವುದು?

_____

4. ಆಟದ ಮೈದಾನದ ಹತ್ತಿರ ಇರುವ ಕೆಂಪು ಬಣ್ಣದ ಕಟ್ಟಡ ಯಾವುದು?

_____

5. ಉದ್ಯಾನವನದ ಹತ್ತಿರದಲ್ಲಿರುವ ಸ್ಥಳಗಳನ್ನು ಬರೆಯಿರಿ.

_____, _____,

_____.

ತುರ್ತು ಸಹಾಯಕ್ಕಾಗಿ...

ಚರ್ಚಿಸಿ ಕಲಿಯಿರಿ

ಅಪ್ಪ, ನಾನು ಗ್ರಂಥಾಲಯದಿಂದ ಮನೆಗೆ ಹಿಂತಿರುಗುವಾಗ ಪಿಂ... ಪಿಂ... ಎಂದು ಶಬ್ದ ಮಾಡುವ ಒಂದು ವಾಹನ ವೇಗವಾಗಿ ಹೋಯಿತು. ಅದರ ಮೇಲೆ 108 ಎಂದು ಬರೆದಿತ್ತು. ಅದು ಯಾವ ವಾಹನ ಅಪ್ಪ.

ಅದು, ತುರ್ತು ಚಿಕಿತ್ಸಾ ವಾಹನ ಸುಮತಿ. ಅದಕ್ಕೆ ಎಲ್ಲಾ ವಾಹನಗಳು ಕಡ್ಡಾಯವಾಗಿ ದಾರಿ ಬಿಡಬೇಕು. ತುರ್ತು ವೈದ್ಯಕೀಯ ಸಹಾಯಕ್ಕಾಗಿ ಸಂಖ್ಯೆ. ಇದೆ ವಿವಿಧ ತುರ್ತು ಪರಿಸ್ಥಿತಿಗಳಿಗೆ ಇನ್ನು ಅನೇಕ ಸಹಾಯವಾಣಿ ಸಂಖ್ಯೆಗಳಿವೆ.

ಅವು ಯಾವುವು ಅಪ್ಪ?

ಪೊಲೀಸ್ ಸಹಾಯಕ್ಕಾಗಿ 100.

ಅಗ್ನಿಶಾಮಕ ಮತ್ತು ರಕ್ಷಣಾ ಕಾರ್ಯಗಳಿಗಾಗಿ 101.

ಓದಿ, ಸಂಖ್ಯೆಗಳು ಬಹಳ ಸುಲಭವಾಗಿದೆ

ಹೌದು, ನಿನ್ನಂತಹ ಮಕ್ಕಳ ರಕ್ಷಣೆಗಾಗಿ ಮತ್ತು ಶೈಕ್ಷಣಿಕ ಮಾರ್ಗದರ್ಶನಕ್ಕಾಗಿ ಕೂಡ ಸಂಖ್ಯೆಗಳಿವೆ.

ನನಗೆ ಗೊತ್ತು! ಇದು ನಮ್ಮ ಎಲ್ಲ ಪುಸ್ತಕಗಳಲ್ಲೂ ಇದೆಯಲ್ಲ!

ಅದ್ಭುತ. ಸುಮತಿ, ಈ ತುರ್ತು ಸಹಾಯವಾಣಿ ಸಂಖ್ಯೆಗಳಿಗೆ ಕರೆ ಮಾಡಲು ಯಾವುದೇ ಶುಲ್ಕ ಇರುವುದಿಲ್ಲ.

ಬನ್ನಿ ಬರೆಯೋಣ

1. ವಾಹನಗಳಿಗೆ ಸೂಕ್ತವಾದ ತುರ್ತು ಸಹಾಯವಾಣಿ ಸಂಖ್ಯೆಯನ್ನು ಬರೆಯಿರಿ.



2. ಪರಿಸ್ಥಿತಿಯನ್ನು ಓದಿ ಉತ್ತರ ಬರೆಯಿರಿ.

ಕೆವಿನ್ ಕುಟುಂಬದವರು, ತಮ್ಮ ಮನೆಯನ್ನು ಬೀಗ ಹಾಕಿ ಮೂರು ದಿನಗಳ ಕಾಲ ಪ್ರವಾಸ ಹೋಗಿದ್ದರು. ಮನೆಗೆ ಹಿಂತಿರುಗಿದ ನಂತರ, ಮನೆಯಲ್ಲಿದ್ದ ವಸ್ತುಗಳನ್ನು ಕಳ್ಳತನವಾಗಿರುವುದನ್ನು ಕಂಡರು. ಈ ಪರಿಸ್ಥಿತಿಯಲ್ಲಿ ಕೆವಿನ್ ಪೋಷಕರು ಯಾವ ಸಹಾಯವಣಿ ಸಂಖ್ಯೆಗೆ ಕರೆ ಮಾಡಬೇಕು?

_____

3. ಸುಮತಿ ತಿಳಿದುಕೊಂಡ ತುರ್ತು ಶುಲ್ಕ ರಹಿತ ಸೇವಾ ಸಂಖ್ಯೆಗಳಿಗೆ ವೃತ್ತ ಹಾಕಿ ಬರೆಯಿರಿ.



ವೈದ್ಯಕೀಯ ಸಹಾಯ

ಪೋಲಿಸ್ ಸಹಾಯ

ಅಗ್ನಿಶಾಮಕ

ಮಕ್ಕಳ ರಕ್ಷಣೆ

ಶಿಕ್ಷಣ ಸಲಹೆ

ಚರ್ಚಿಸಿ ಕಲಿಯಿರಿ

ಸುಮತಿಯ ತಂದೆ ಕಛೇರಿಗೆ ಹೋಗಲು ಸಿದ್ದರಾಗುತ್ತಿದ್ದಾರೆ. ಆಗ...



ಅಪ್ಪ! ಅಪ್ಪ! ಇಲ್ಲಿ ನೋಡಿ.

ಏನು ಸುಮತಿ?

ಕಸದಲ್ಲಿ ಸಿಕ್ಕದ 45 ಸವರನ್ ಚಿನ್ನದ ಆಭರಣಗಳನ್ನು ಪೊಲೀಸ್ ಠಾಣೆಗೆ ಒಪ್ಪಿಸಿದ ಪೌರಕಾರ್ಮಿಕ ಪದ್ಮ.

ಚೆನ್ನೈ, ಜನವರಿ 12, 2026

ಚೆನ್ನೈನ ತ್ಯಾಗರಾಯ ನಗರದಲ್ಲಿ ಸುಮಾರು 45 ಸವರನ್ ಚಿನ್ನದ ಆಭರಣಗಳಿಂದ ತುಂಬಿದ್ದ ಚೀಲವನ್ನು ಪೌರಕಾರ್ಮಿಕರಾದ ಶ್ರೀಮತಿ ಪದ್ಮಾರವರು, ಅದನ್ನು ಪೊಲೀಸ್ ಠಾಣೆಗೆ ಒಪ್ಪಿಸುವ ಮೂಲಕ ತಮ್ಮ ಪ್ರಾಮಾಣಿಕತೆಯನ್ನು ಮೆರೆದ್ದಾರೆ. ಆಭರಣಗಳ ಮೌಲ್ಯ ಸುಮಾರು 40 ಲಕ್ಷ ರೂಪಾಯಿ ಎಂದು ಹೇಳಲಾಗುತ್ತದೆ. ಪೊಲೀಸರು ಆಭರಣಗಳನ್ನು ಅದರ ಅಸಲಿ ಮಾಲೀಕರಿಗೆ ಒಪ್ಪಿಸಿದರು. ಪದ್ಮಾ ಅವರ ಈ ಕಾರ್ಯಕ್ಕೆ ಪ್ರಶಂಸೆ ವ್ಯಕ್ತವಾಗಿದ್ದಾರೆ.

ಪದ್ಮ ಎಂಬ ಪೌರಕಾರ್ಮಿಕರು, ತಮಗೆ ಸಿಕ್ಕ ಚಿನ್ನದ ಆಭರಣಗಳನ್ನು ಪೊಲೀಸ್ ಠಾಣೆಗೆ ನೀಡಿದ್ದಾರೆ. ಸಿಕ್ಕ ವಸ್ತುಗಳನ್ನು ನಿಮ್ಮ ಬಳಿ ಏಕೆ ಕೊಡುತ್ತಾರೆ ಅಪ್ಪ?

ಕಳೆದ ಹೋದ ವಸ್ತುಗಳನ್ನು ಹುಡುಕುವುದು ನಮ್ಮ ಕೆಲಸ. ಪೌರಕಾರ್ಮಿಕ ಪದ್ಮ ಅವರಂತೆ ಎಲ್ಲರೂ ಪ್ರಾಮಾಣಿಕರಾಗಿದ್ದರೆ ನಮ್ಮ ಕೆಲಸ ಸುಲಭವಾಗುತ್ತದೆ.

ನಿಮ್ಮ ಬೇರೆ ಕೆಲಸಗಳ ಬಗ್ಗೆ ಹೇಳಿ ಅಪ್ಪ!

ಸಾರ್ವಜನಿಕರನ್ನು ರಕ್ಷಿಸುವುದು ನಮ್ಮ ಮೊದಲ ಕೆಲಸ. ಜೊತೆಗೆ, ತುರ್ತು ಸಹಾಯ, ದೂರುಗಳಿಗೆ ಪರಿಹಾರ ಕಂಡುಕೊಳ್ಳುವುದು ಮುಂತಾದ ಕೆಲಸಗಳಿವೆ. ಸರಿ, ಸುಮತಿ ಸಮಯವಾಯಿತು ಹೋಗಿ ಬರುತ್ತೇನೆ.

ಯಾರು ನೋಡದಿದ್ದರು, ಸರಿಯಾದದ್ದನ್ನು ಮಾಡುವುದೇ ನಿಜವಾದ ಪ್ರಾಮಾಣಿಕತೆ.



ಟಾ...ಟಾ.... ಅಪ್ಪ!

ಆಯ್ಕೆ ಮಾಡೋಣ

1. ಪೊಲೀಸರ ಸಹಾಯಬೇಕಾದ ಸ್ಥಳಗಳಿಗೆ (✓) ಗುರುತು ಹಾಕಿರಿ.

2. ಕೆಳಗಿನ ಕೆಲಸಗಳಲ್ಲಿ ಪೊಲೀಸರಿಗೆ ಅನ್ವಯಿಸದ ಕೆಲಸವನ್ನು ಆರಿಸಿ ಬರೆಯಿರಿ.

ಅ) ಸಾರ್ವಜನಿಕರನ್ನು ರಕ್ಷಿಸುವುದು ◯

ಆ) ಜನಸಂದಣಿ ಇರುವ ಸ್ಥಳಗಳಲ್ಲಿ ಜನರನ್ನು ನಿಯಂತ್ರಿಸುವುದು ◯

ಇ) ರಾತ್ರಿ ಗಸ್ತು ತಿರುಗುವುದು ◯

ಈ) ರೋಗಿಗಳನ್ನು ಪರೀಕ್ಷಿಸುವುದು ◯

ಬನ್ನಿ ಬರೆಯೋಣ

ಒಗಟುಗಳನ್ನು ರಚಿಸಿ.

1. ನನ್ನನ್ನು ಕರೆಯಲು 101.

ನಾನು ಕೆಂಪು ಬಣ್ಣದಲ್ಲಿ ಇರುತ್ತೇನೆ.

ಗಂಟೆ ಬಾರಿಸುತ್ತಾ ಬರುತ್ತೇನೆ.

ಬೆಂಕಿಯನ್ನು ನಂದಿಸುತ್ತೇನೆ.

2. ನನ್ನನ್ನು ಕರೆಯಲು 108.

ಕಲಿಕಾ ಪಯಣ

1. ಸೂಚನೆಗಳನ್ನು ಓದಿ ಮತ್ತು ಚೌಕಗಳನ್ನು ತುಂಬಿರಿ.

(ಗ್ರಂಥಾಲಯ, ಉದ್ಯಾನವನ, ಅಗ್ನಿಶಾಮಕ ದಳ, ಪೋಲೀಸ್ ಠಾಣೆ, ಆಸ್ಪತ್ರೆ)



ಎಡದಿಂದ ಬಲಕ್ಕೆ

1. ಪರೀಕ್ಷಿಸುವುದು
2. ನಿಶಬ್ದವಾಗಿ ಓದುವ ಸ್ಥಳ
3. 101 ರೊಂದಿಗೆ ಸಂಯೋಜಿತವಾಗಿರುವ ನಿಲ್ದಾಣ
5. ಮನರಂಜನೆ

ಮೇಲಿಂದ ಕೆಳಕ್ಕೆ

4. ಸಾರ್ವಜನಿಕರ ರಕ್ಷಣೆ

2. ಮೌಖಿಕ ಪ್ರಶ್ನೆ

ತುರ್ತು ಸಹಾಯ ಸಂಖ್ಯೆಗಳನ್ನು ಯಾವ ಸಂದರ್ಭದಲ್ಲಿ ಬಳಸಬಹುದು?

3. ಚಟುವಟಿಕೆ

'ಪೊಲೀಸ್ ಇಲಾಖೆ ನಿಮ್ಮ ಸ್ನೇಹಿತ' ಎಂಬ ವಿಷಯದ ಮೇಲೆ ಒಂದು ಸಣ್ಣ ಹಾಡನ್ನು ಬರೆದು, ತರಗತಿಯಲ್ಲಿ ಪ್ರದರ್ಶಿಸಿ.

ನಾನೇ ಮಾಡುತ್ತೇನೆ

1. ನಕ್ಷೆ ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ.



1. ನಕ್ಷೆಯಲ್ಲಿ ಸಲೀಂ ಮನೆಯನ್ನು ಪತ್ತೆ ಹಚ್ಚಿ ವೃತ್ತ ಹಾಕಿ.

2. ಮೇರಿಯ ಅಮ್ಮ, ಬ್ಯಾಂಕಿಗೆ ಹೋಗಬೇಕೆಂದರೆ ಯಾವ ಯಾವ ಕಟ್ಟಡಗಳನ್ನು ದಾಟಿ ಹೋಗಬೇಕು?

_____

_____

3. ರವಿ, ಸಲೀಂ, ಮೇರಿ ಮೂವರು ಸಂಜೆ ಸಮಯದಲ್ಲಿ ಅವರವರ ಮನೆಯಿಂದ ಆಟದ ಮೈದಾನಕ್ಕೆ ಹೋಗುತ್ತಾರೆ. ಯಾರು ಮೊದಲು ಮೈದಾನವನ್ನು ತಲುಪುತ್ತಾರೆ?

_____

4. ಸಲೀಂಮನ ಮನೆ ಶಾಲೆಯಿಂದ ದೂರದಲ್ಲಿದೆ. ಸರಿಯೇ? ತಪ್ಪೇ?

_____

5. ರೈಲ್ವೆ ನಿಲ್ದಾಣದ ಹತ್ತಿರ ಯಾರ ಮನೆ ಇದೆ?

_____

6. ಸಲೀಮನ ಮಾವ, ಬಸ್ ನಿಲ್ದಾಣಕ್ಕೆ ಬಂದು ಇಳಿಯುತ್ತಾರೆ. ಅವರು ಹೊರಗೆ ಬಂದ ಕೂಡಲೇ ಮೊದಲು ನೋಡುವ ಕಟ್ಟಡ ಯಾವುದು?

_____

2. ಮೌಖಿಕ ಪ್ರಶ್ನೆ

ಗ್ರಂಥಾಲಯದಿಂದ ನಮಗೆ ಏನು ಉಪಯೋಗವಾಗುತ್ತದೆ?

3. ಕಾರ್ಯ ಯೋಜನೆ

1. ನಿಮ್ಮ ಮನೆಯ ಸುತ್ತಮುತ್ತಲಿರುವ ಪ್ರಮುಖ ಸ್ಥಳಗಳ ಭೂಪಟವನ್ನು ಬಿಡಿಸಿ ತರಗತಿಗಳಲ್ಲಿ ಪ್ರದರ್ಶಿಸಿ.
2. ವೈದ್ಯರು / ಪೊಲೀಸ್ / ಅಗ್ನಿಶಾಮಕ ದಳದವರು / ಸಮಾಜ ಸೇವಕರು / ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಧನ್ಯವಾದ ಪತ್ರ ಸಿದ್ಧಪಡಿಸಿ ತರಗತಿಯಲ್ಲಿ ಪ್ರದರ್ಶಿಸಿ.

ನಾನು ಕಲಿತದ್ದು

ನನಗೆ ತಿಳಿದ ವಿಷಯಗಳ ಆಧಾರದ ಮೇಲೆ ನಕ್ಷತ್ರಗಳಿಗೆ ಬಣ್ಣ ಹಚ್ಚುವೆನು.

1. ಮನೆ ಮತ್ತು ಶಾಲೆಯ ಹತ್ತಿರವಿರುವ ಪ್ರಮುಖ ಸ್ಥಳಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.
2. ಭೂಪಟಗಳನ್ನು ನೋಡಿ ದಾರಿ ಕಂಡುಹಿಡಿಯಲು ಸಾಧ್ಯವಾಗುತ್ತದೆ.
3. ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯ ಮತ್ತು ಪೊಲೀಸ್ ಠಾಣೆಯ ಕೆಲಸಗಳನ್ನು ಸರಳ ಶಬ್ದಗಳಲ್ಲಿ ವಿವರಿಸಲು ಸಾಧ್ಯವಾಗುತ್ತದೆ.
4. ತುರ್ತು ಸಹಾಯದ ಸಂಖ್ಯೆಗಳನ್ನು ಅಗತ್ಯ ಸಂದರ್ಭಗಳಲ್ಲಿ ಬಳಸಲು ಸಾಧ್ಯವಾಗುತ್ತದೆ.

ಕಲಿಕಾ ಪಯಣ

ಪ್ರಾಥಮಿಕ ಆರೋಗ್ಯ ಕೇಂದ್ರ ಗ್ರಂಥಾಲಯ ಮತ್ತು ಪೊಲೀಸ್ ಠಾಣೆಯ ಕಾರ್ಯಗಳನ್ನು ಸರಳ ಪದಗಳಲ್ಲಿ ವಿವರಿಸುವುದು.

ಅಗತ್ಯವಿದ್ದಾಗ ತುರ್ತು ಸಹಾಯದ ಸಂಖ್ಯೆಗಳನ್ನು ಬಳಸುವುದು.

ನಕ್ಷೆಗಳನ್ನು ಬಳಸಿ ಸುತ್ತಮುತ್ತಲಿನ ಸ್ಥಳಗಳನ್ನು ಗುರುತಿಸುವುದು.

ತರಗತಿಯ ನಿಯಮಗಳನ್ನು ತಿಳಿದು ಅವುಗಳನ್ನು ಪಾಲಿಸುವುದು.

ಕುಟುಂಬದ ಸಂಬಂಧಗಳನ್ನು ಅರ್ಥ ಮಾಡಿಕೊಂಡು ಸಂಬಂಧಗಳ ಹೆಸರನ್ನು ಹೇಳುವುದು.

ತನ್ನ ಸಾಮರ್ಥ್ಯ, ಆಸಕ್ತಿ ಮತ್ತು ಕೌಶಲ್ಯಗಳನ್ನು ಗುರುತಿಸಿ ವಿವರಿಸುವುದು.

Standard 3 - Mathematics - Term - I - Kannada Medium

Textbook Development Team

Co-ordinator

Dr. T. Jayagandhi,
Senior Lecturer,
SCERT, Chennai

Reviewer

K.N. Adishesha, SGT
PUPS Sothanapuram,
Talavadi, Erode

Translator

C. Kumara, SGT
PUMS Arulavadi,
Talavadi, Erode

Digital Content Team

B. Magdalene Premalatha,
Digital Content Co-ordinator,
B.T. Asst., SCERT, Chennai.

T. Sivamalar Mannan, SGT,
PUPS, Kokkarakalvalasu,
Thoppampatti Block, Dindigul.

S. Gopalakrishnan,
B.T. Asst., GBHSS, Kunnam,
Perambalur.

Art and Design Team

M. Amalraj,
Layout Co-ordinator
B.T. Asst., SCERT, Chennai.

E.J. Karunakaran, Designer

T . Ramesh, Designer

Illustration

R. Rajesh

Wrapper Design

Kathir Arumugam

Standard 3 - Science - Term - I - Kannada Medium

Textbook Development Team

Co-ordinator

Dr. T. Jayagandhi,
Senior Lecturer,
SCERT, Chennai

Reviewer

K.N. Adishesha, SGT
PUPS Sothanapuram,
Talavadi, Erode

Translator

G. Mamatha, SGT
PUMS Talavadi
Talavadi, Erode

S. Mary Flora, SGT
PUMS Mettalavadi
Talavadi, Erode

Digital Content Team

B. Magdalene Premalatha,
Digital Content Co-ordinator,
B.T. Asst., SCERT, Chennai.

T. Sivamalar Mannan, SGT,
PUPS, Kokkarakalvalasu,
Thoppampatti Block, Dindigul.

S. Gopalakrishnan,
B.T. Asst., GBHSS, Kunnam,
Perambalur.

Art and Design Team

M. Amalraj,
Layout Co-ordinator
B.T. Asst., SCERT, Chennai.

P. Sandhiya, Designer
K. Sinthuja, Designer

Illustration

B. Pramoth

Wrapper Design

Kathir Arumugam

Standard 3 - Social Science - Term - I - Kannada Medium

Textbook Development Team

Co-ordinator

Dr. T. Jayagandhi,
Senior Lecturer,
SCERT, Chennai

Reviewer

K.N. Adishesha, SGT
PUPS Sothanapuram,
Talavadi, Erode

Translator

S. Kavitha, Head Mistress
PUPS Gummalapuram
Thally, Krishnagiri

M. Vijayalakshmi, SGT
PUPS Gummalapuram
Thally, Krishnagiri

Digital Content Team

B. Magdalene Premalatha,
Digital Content Co-ordinator,
B.T. Asst., SCERT, Chennai.

T. Sivamalar Mannan, SGT,
PUPS, Kokkarakalvalasu,
Thoppampatti Block, Dindigul.

S. Gopalakrishnan,
B.T. Asst., GBHSS, Kunnam,
Perambalur.

Art and Design Team

M. Amalraj,
Layout Co-ordinator
B.T. Asst., SCERT, Chennai.

T. Ramesh, Designer

Illustration

B. Pramoth

Wrapper Design

Kathir Arumugam

This book has been printed on 80 G.S.M.
Elegant Maplitho paper.
Printed by offset at: